ಹೊಸ ಮನುಷ್ಯ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೭ ಸೆಪ್ಟೆಂಬರ್-೨೦೦೬ ಸಂಚಿಕೆ-೨



ಸಮ್ಮಿಶ್ರ ಸರ್ಕಾರ ಮತ್ತು ಮತದಾರ

೧) ಸಮ್ಮಿಶ ಸರ್ಕಾರ ಮತ್ತು ಮತದಾರ

-ಸುರೇಂದ್ರ ಕೌಲಗಿ

ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಒಂದು ಹೊಸ ತಿರುವು ತೆಗೆದುಕೊಳ್ಳುವ ಹಂತ ಮುಟ್ಟಿದೆ. ಈ ಬೆಳವಣಿಗೆಯಲ್ಲಿ ಸಮ್ಮಿಶ್ರ ಸರ್ಕಾರಗಳ ಪಾತ್ರವೂ ಹಿರಿದಾಗಿದೆ. ಪ್ರಜಾಪ್ರಭುತ್ವದ ಎಲ್ಲ ಆಗು. ಹೋಗುಗಳಿಗೆ ಕಾರಣವಾಗಿರುವ ಮತದಾರನೆ ಸಮ್ಮಿಶ್ರ ಸರ್ಕಾರದ ಸಾಧಕ ಬಾಧಕಗಳನ್ನು ತೀರ್ಮಾನಿಸುವವನಾಗಿದ್ದಾನೆ. ಈ ಪ್ರಚಲಿತ ವಿಷಯ ಕುರಿತಾದಸ ಚಿಂತನ ಈ ಲೇಖನ.

೨) ಆಧುನಿಕ ಹೋರಾಟಗಾರರಿಗೆ ಗಾಂಧಿ ತೋರಿದ ಮಾರ್ಗ

-ಸತ್ಯವೃತ

ದೇಶದಲ್ಲಿ ದಿನಂಪ್ರತಿ ಹಕ್ಕುಗಳಿಗಾಗಿ ಮತ್ತು ಅನ್ಯಾಯದ ವಿರುದ್ಧ ಹೋರಾಟಗಳು ನಡೆಯುತ್ತಲೆ ಇವೆ. ಗಾಂಧಿಯವರು ಸಹ ಇಂಥ ಉದ್ದೇಶಗಳಿಗಾಗಿಯೆ ಹೋರಾಟ ನಡೆಸಿದರು. ಮಹಾತ್ಮರ ಆ ಹೋರಾಟಗಳು ಇಂದಿನ ಹೋರಾಟಗಾರರಿಗೆ ಮಾರ್ಗದರ್ಶಕವಾಗಿದೆಯೆಂಬುದನ್ನು ಈ ಲೇಖನ ಸ್ಪಷ್ಟ ಪಡಿಸುತ್ತದೆ.

೩) ಮಾಹಿತಿ ಹಕ್ಕೆಂಬ ಕಾನೂನು ಒಂದು ನಟನೆ

-ಕೆ.ವಿ. ರಾಧಾಕೃಷ್ಣ ಮೆನನ್

ಪ್ರಜಾತಂತ್ರದ ಯಶಸ್ಸಿಗೆ ಆಡಳಿತದ ಪಾರದರ್ಶಕತೆ ಬಹು ಅಗತ್ಯವೆಂಬುದು ಬಹಳ ತಡವಾಗಿಯಾದರೂ ನಮ್ಮ ಜನನಾಯಕರಿಗೆ ಗೊತ್ತಾಗಿರುವುದು ಸಂತಸದ ವಿಷಯವಾದರೂ ಅದರಲ್ಲಿ ಬಹಳ ಹಿಂಜರಿತವಿರುವುದು ಒಳ್ಳೆಯ ಲಕ್ಷಣವಲ್ಲ. ಈ ಬಗ್ಗೆ ಹಲವಾರು ಸಂಗತಿಗಳು ಈ ಲೇಖನದಲ್ಲಿ ಬಿಂಬಿತವಾಗಿವೆ.

೩) ಇಂದಿನ ರಾಜಕಾರಣಕ್ಕೆ ಕಾಯಕಲ್ಪ ಅಗತ್ಯ

-ಎಚ್.ಎಸ್. ದೊರೆಸ್ವಾಮಿ

ಈಗ ತಾನೆ ಲೋಕಸಭಾ ಸದಸ್ಯರು ತಮ್ಮ ಮಾಹೆಯಾನ ವೇತನವನ್ನು ೧೨,೦೦೦ ದಿಂದ ೧೬,೦೦೦ ರೂಗಳಿಗೆ ಹೆಚ್ಚಿಸಿಕೊಂಡಿದ್ದಾರೆ. ಹಾಗೆ ಹೆಚ್ಚಿಸಿಕೊಳ್ಳುವಾಗ ಅವರು ತಮ್ಮ ವೇತನವನ್ನು ಶ್ರೀಮಂತ ರಾಷ್ಟ್ರಗಳ ಸದಸ್ಯರೊಂದಿಗೆ ಹೋಲಿಸಿಕೊಂಡಿದ್ದಾರೆ. ಆದರೆ ಗಾಂಧೀಜಿ ದೇಶದಲ್ಲಿಯ ಬಡತನವನ್ನು ಗಮನದಲ್ಲಿಟ್ಟುಕೊಂಡು ವೇತನ ಹೆಚ್ಚಿಸಿಕೊಳ್ಳಬೇಕೆಂದು ಹೇಳಿದ್ದರು. ಇಂದಿನ ಸ್ಥಿತಿಯ ಮೇಲೆ ಲೇಖಕರು ಬೆಳಕು ಚೆಲ್ಲಿದ್ದಾರೆ.

೪) ಆರೋಗ್ಯಕ್ಕಾಗಿ ಕೆಲವು ಸುಲಭೋಪಾಯಗಳು

-ಡಾ॥ ಜಿ.ವಿ.ಕುಲಕರ್ಣಿ

ನಿಸರ್ಗೋಪಚಾರದ ಬಗ್ಗೆ ಕೆಲ ಉಪಯುಕ್ತ ಮಾಹಿತಿಗಳು ಈ ಲೇಖನದಲ್ಲಿವೆ.

೬) ಸಂಪ್ರದಾಯ ಮುರಿದ ತಲಾಲ ಗ್ರಾಮದ ಕನ್ಯೆಯರು *-ಕೆ.ಆರ್.ಮೋಹನ್*

೭) ವಿನೋಬಾ ಹೇಳಿದ ಕೆಲ ದೃಷ್ಟಾಂತ ಕಥೆಗಳು

೮) ಯುಗಾಚಾರ್ಯ ವಿವೇಕಾನಂದ

-ಕೆ.ಆರ್.ಶ್ರೀಹರಿ.

೯) ಜನಪದ ನಿಲಯದ ಅಂತರಂಗದಲ್ಲಿ....................೩೪

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಸೆಪ್ಟೆಂಬರ್-೨೦೦೬
ಸಂಪುಟ-೭
ಸಂಚಿಕೆ-೨

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

✆ ೦೮೨೩೬ ೨೯೮೭೫೪
e-mail - janapada@yahoo.com

ಮಹಾಚೇತನಕೆ ಮಣಿಹೆ

ಚಿಮ್ಮಿತೊಂದು ಮಹಾಚೇತನ
'ಪರಂಧಾಮ'ದ ಕುಟಿಯಿಂದ
ಅನಂತದಲಿ ಲೀನಗೊಂಡಿತು
ಯುಗಾಂತರದ ಚಿತ್ರಗಳ ಚಿಮ್ಮಿ

ಭೂಮಿಜೆಯ ಬಿಡುಗಡೆಗೆ
ಕಟಿಬದ್ಧ ಶ್ರೀ ಹನುಮವೀರ

ಭೂಮಿದಾನವ ಬೇಡಿದ
ಶ್ರೀ ವಾಮನಾವತಾರ
ಅಂಗುಲಿಮಾಲನೆದುರು
ನಿರ್ಭಿಡೆಯಿಂದ ನಿಂತ ಧೀರ
ಗೋಗ್ರಹಣ ನಿವಾರಿಸಿದ
ಪಾಂಡವಾಗ್ರಣಿ ಧರ್ಮರಾಯ
ಕುರುಕ್ಷೇತ್ರದ ನಡುವೆ
ಗಿರಿನಾಯಕನ ಸಾಕ್ಷಾತ್ಕಾರ

ಇಂತೆಮ್ಮ ಬೆರಗು ಗೊಳಿಸಿದ
ಈ ಚಿತ್ರ ಸಾಲು ಯಾರದು?
ಇದು, ಸಂತ ಶ್ರೀ ವಿನೋಬಾಜಿಯ
'ಸರ್ವೋದಯ' ಶಾಂತಿಮಂತ್ರ
ಜಗತ್ತಿನುದ್ಧಾರಕೆಂದಿತ್ತ
'ಜೈ ಜಗತ್'! ಮಹಾ ಸೂತ್ರ
ನಮೋ ದಿವ್ಯ ಚೇತನ! ನಮೋ
ನಮೋ!

-ಶಾರದಾ ಜಡೆ

(ಸೆಪ್ಟೆಂಬರ್ ೧೧ ವಿನೋಬಾರ ಜನ್ಮದಿನ)

ವಿಚಾರ ದೀಪ್ತಿ

ಪ್ರಜಾರಾಜ್ಯದಲ್ಲಿ ಪ್ರತಿಯೊಬ್ಬರಿಗೂ ವಿಚಾರ ಸ್ವಾತಂತ್ರ್ಯವಿದೆ. ಒಂದು ಕಡೆಯಿಂದ ಪ್ರಜಾರಾಜ್ಯದ ಮಾತನಾಡಿ, ಇನ್ನೊಂದು ಕಡೆಯಿಂದ ವಿದ್ಯಾರ್ಥಿಗಳ ಬುದ್ಧಿಯನ್ನು ಒಂದು ಚೌಕಟ್ಟಿನೊಳಗೆ ತುರುಕುವುದು, ಪ್ರಜಾರಾಜ್ಯದ ಮೂಲಭೂತ ವಿಚಾರಕ್ಕೆ ವಿರೋಧ. ಇಂತಹ ಪ್ರಯತ್ನವೆ ರಶಿಯಾದಲ್ಲಿ, ಚೈನಾದಲ್ಲಿ ನಡೆಯಿತು. ಇದರ ಪರಿಣಾಮವೇನಾಯಿತು? ಎರಡೆರಡು-ಮೂರುಮೂರು ಬಾರಿ ಹೊಸದಾಗಿ ಇತಿಹಾಸ ಬರೆಯಬೇಕಾಯಿತು. ಇತಿಹಾಸವೆಂದರೇನು? ಇತಿಹ ಆಸ: ನಿಜವಾಗಿ ನಡೆದುದು ಹೀಗೆ-ಎಂದು ನಮ್ಮ ಇಚ್ಛೆಯಂತೆ ವಿದ್ಯಾರ್ಥಿಗಳ ಬುದ್ಧಿಯನ್ನು ನಾವು ರೂಪಿಸುತ್ತೇವೆ. ಆದರೆ ಈಗ ಇತಿ-ಹಾಸ (ಹಾಸ್ಯಾಸ್ಪದ) ಆಗಿದೆ ಎಂತಲೆ ಇತಿಹಾಸವೂ ಅದಕ್ಕನುಕೂಲವಾದ ಜಾಡನ್ನೇ ಹಿಡಿಯುತ್ತದೆ. ಅಂದರೆ ಪರಿಣಾಮವೇನಾಯಿತು? ಶಂಕರ, ರಾಮಾನುಜ, ತುಲಸೀದಾಸ, ಕಬೀರರಿಗೆ ಕೊಡದಿದ್ದ ಸತ್ತೆ, ಶಿಕ್ಷಣಾಧಿಕಾರಿಗೆ ನಾವು ಕೊಟ್ಟಹಾಗಾಯಿತು.

ಇಂದು ಶಿಕ್ಷಣಾಧಿಕಾರಿ ನಿರ್ಣಯ ಮಾಡಿದ ಪುಸ್ತಕವನ್ನು ಮಕ್ಕಳು ಓದಬೇಕು. ಪರೀಕ್ಷೆಗೆ ಕೂಡಬೇಕು. ತೇರ್ಗಡೆಯಾಗದೆ ಹೋದರೆ ಮುಂದೆ ಅವರ ಪ್ರಗತಿ ನಿಂತಂತೆಯೆ. ತುಲಸೀದಾಸರ ಪುಸ್ತಕ ಎಲ್ಲ ಜನರೂ ಓದುತ್ತಾರೆ. ತಮ್ಮ ಸ್ವೇಚ್ಛೆಯಿಂದ ಓದುತ್ತಾರೆ. ಮಕ್ಕಳು ಬಲಾತ್ಕಾರವಾಗಿ ತಮ್ಮ ಪುಸ್ತಕ ಓದಲೇಬೇಕೆಂಬ ಅಧಿಕಾರ ತುಲಸೀದಾಸರಿಗಿರಲಿಲ್ಲ. ಆದರೆ ನಾವು ಅಂತಹ ಅಧಿಕಾರವನ್ನು ಶಿಕ್ಷಣಾಧಿಕಾರಿಗಳಿಗೆ ಕೊಟ್ಟಿದ್ದೇವೆ. ಶಂಕರ, ರಾಮಾನುಜ, ಕಬೀರ, ತುಲಸೀದಾಸರಿಗಿಂತಲೂ ಮಿಗಿಲಾದ ಯಾವ ಪ್ರತಿಭೆಯನ್ನು ಅವರಲ್ಲಿ ನಾವು ಕಂಡಿದ್ದೇವೆ? ಎಂತಲೆ ಇಂತಹ ಅಧಿಕಾರ ಅವರಿಗೆ ನೀಡಬಾರದು. ರಾಷ್ಟ್ರಕ್ಕೆ ಇದರಿಂದ ತುಂಬಾ ಹಾನಿಯಾಗುತ್ತದೆ. ಶಿಕ್ಷಣದ ಬಗ್ಗೆ ನನ್ನ ಮೂಲಭೂತ ವಿಚಾರವಿದು.

ಶಿಕ್ಷಣದ ಮುಖ್ಯ ವಿಷಯಗಳು ಮೂರು. ಯೋಗ, ಉದ್ಯೋಗ, ಸಹಯೋಗ. ಯೋಗದ ಅರ್ಥ, ಬರಿ ಆಸನ ಹಾಕುವುದಲ್ಲ. ಚಿತ್ತದ ಮೇಲೆ ಹೇಗೆ ಅಂಕುಶವಿಟ್ಟುಕೊಳ್ಳಬೇಕು, ಇಂದ್ರಿಯಗಳ ಮೇಲೆ ಅಧಿಕಾರ ಹೇಗೆ ನಡೆಸಬೇಕು, ಮನಸ್ಸನ್ನು ಹೇಗೆ ಸ್ವಾಧೀನಮಾಡಿಕೊಳ್ಳಬೇಕು, ವಾಣಿಯ ಹಿಡಿತವನ್ನು ಹೇಗೆ ಸಾಧಿಸಿಕೊಳ್ಳಬೇಕು, ಇದೇ ನಿಜವಾದ ಯೋಗದ ಅರ್ಥ. ಇದನ್ನೇ ಗೀತೆಯಲ್ಲಿ ಸ್ಥಿತಪ್ರಜ್ಞೆ ಎಂದು ಕರೆದಿದೆ. ಇಂದು ಇದರ ಅಗತ್ಯ ಮೊದಲಿಗಿಂತಲೂ ಹೆಚ್ಚಾಗಿದೆ. ಏಕೆ ಗೊತ್ತೆ? ಇಂದು ಪ್ರತಿನಿತ್ಯ ನೂರಾರು ಘಟನೆಗಳನ್ನು ಕೇಳಬೇಕಾಗುತ್ತದೆ, ನೋಡಬೇಕಾಗುತ್ತದೆ. ಜೊತೆಗೆ ನಾಲ್ಕೂ ನಿಟ್ಟಿನಿಂದ ವಿಚಾರಗಳ ಆಕ್ರಮಣ ಬೇರೆ, ಹಿಂದೆಂದೂ ಇಷ್ಟೊಂದು ಆಕ್ರಮಣ ಮನುಷ್ಯನ ಮೇಲಾಗುತ್ತಿರಲಿಲ್ಲ. ಇದು ವಿಜ್ಞಾನಯುಗ. ಇಂತಹ ಪರಿಸ್ಥಿತಿಯಲ್ಲಿ ಚಿತ್ತವನ್ನು ಶಾಂತವಾಗಿಡುವುದು, ಸ್ಥಿರವಾಗಿಡುವುದು, ಹಿಡಿತದಲ್ಲಿಡುವುದು, ಅತ್ಯಂತ ಮಹತ್ವದ ವಿಷಯ. ಎಂತಲೇ ಸ್ಥಿತಪ್ರಜ್ಞ ದರ್ಶನದ ಅಗತ್ಯ ಹಿಂದೆಂದಿಗಿಂತಲೂ ಇಂದು ಅಧಿಕವಾಗಿದೆ. ಪ್ರಜ್ಞೆಯ ಸ್ಥಿರತೆಯೆ ಯೋಗದ ಮುಖ್ಯ ವಿಷಯ.

-ವಿನೋಬಾ

***

ಸಮ್ಮಿಶ್ರ ಸರ್ಕಾರ ಮತ್ತು ಮತದಾರ

–ಸುರೇಂದ್ರ ಕೌಲಗಿ.

"ಈಗಂತೂ ಜೀವನದ ಪ್ರತಿಯೊಂದು ಅಂಗಾಂಗದಲ್ಲಿಯೂ ರಾಜಕೀಯದ, ರಾಜ್ಯವ್ಯವಸ್ಥೆಯ ಸಂಬಂಧ ಬರುತ್ತದೆ. ಆದುದರಿಂದ ಸಜ್ಜನರು, ಮಹಾಜನರು, ಜನತೆ ಯಾರೂ ಉದಾಸೀನರಾಗಿರಲು ಸಾಧ್ಯವಿಲ್ಲ." –ವಿನೋಬಾ.

ದೇಶದಲ್ಲಿರುವ ಸಮ್ಮಿಶ್ರ ಸರ್ಕಾರಗಳ ನೆತ್ತಿಯ ಮೇಲೆ ಅನಿಶ್ಚಿತತೆಯ ಕತ್ತಿ ನೇತಾಡುತ್ತಿದೆ. ಕೃತಕ ಪ್ರಾಣವಾಯುವಿನ ಬಲದಿಂದ ಜೀವ ಹಿಡಿದಿರುವ ರೋಗಿ ಯಾವ ಗಳಿಗೆಯಲ್ಲಾದರೂ ಪ್ರಾಣ ಬಿಡುವ ಸಂಭವವಿರುವಂತೆ ಇಂದು ಕೇಂದ್ರದ ಹಾಗೂ ರಾಜ್ಯದಲ್ಲಿರುವ ಸಮ್ಮಿಶ್ರ ಸರ್ಕಾರಗಳ ಸ್ಥಿತಿಯಾಗಿದೆ. ವಿವಿಧ ಪಕ್ಷಗಳ ಒಕ್ಕೂಟದ ಸಮ್ಮಿಶ್ರ ಸರ್ಕಾರಗಳು ಮಧ್ಯಂತರ ಸಾರ್ವತ್ರಿಕ ಚುನಾವಣೆಯು ಇಷ್ಟರಲ್ಲಿಯೇ ಬರಬಹುದೆಂಬುದರ ಸಂಕೇತಗಳನ್ನು ಕೊಡುತ್ತಿವೆ. ಸಮ್ಮಿಶ್ರ ಸರ್ಕಾರಗಳಲ್ಲಿ ಭಾಗಿಯಾಗಿರುವ ರಾಜಕೀಯ ಪಕ್ಷಗಳಂತೂ ಚುನಾವಣೆಗಾಗಿ ತುದಿಗಾಲ ಮೇಲೆ ನಿಂತಿವೆ. ಕಳೆಯುವ ಒಂದೊಂದು ದಿನವೂ ವಿರೋಧ ಪಕ್ಷಗಳ ಸಹನೆಯನ್ನು ಪರೀಕ್ಷಿಸುವಂತಿದೆ. ಕಳೆದ ಜುಲೈ ತಿಂಗಳಲ್ಲಿಯಷ್ಟೆ ಪ್ರಧಾನಿ ಮನಮೋಹನ್‌ಸಿಂಗ್ ಮತ್ತು ಅರ್ಥಮಂತ್ರಿ ಪಿ. ಚಿದಂಬರಂ ತಮ್ಮ ಪಕ್ಷದ ನಾಯಕಿಯಿಂದಲೇ ಖಾಸಗೀಕರಣದ ತಮ್ಮ ಪ್ರಯತ್ನಕ್ಕೆ ದ್ರೋಹವನ್ನನುಭವಿಸಿದ್ದರಿಂದ ರಾಜೀನಾಮೆ ಕೊಟ್ಟಿದ್ದಾರೆಂಬ ವದಂತಿ ರಾಜಧಾನಿಯಲ್ಲಿ ದಟ್ಟವಾಗಿ ಹರಡಿತ್ತು. ನೈವೇಲಿ ಲಿಗ್ನೈಟ್ ಕಾರ್ಪೊರೇಶನ್‌ನಲ್ಲಿಯ ಕೇಂದ್ರ ಸರ್ಕಾರದ ಬಂಡವಾಳವನ್ನು ಹಿಂದಕ್ಕೆ ಪಡೆಯಲು ಉದ್ದೇಶಿಸಿದ್ದ ಕೇಂದ್ರ ಸರ್ಕಾರದ ಪ್ರಯತ್ನಕ್ಕೆ ಸಮ್ಮಿಶ್ರ ಸರ್ಕಾರದ ಸದಸ್ಯ ಪಕ್ಷವಾದ ಡಿ.ಎಂ.ಕೆ. ತೀವ್ರ ವಿರೋಧ ಮಾಡಿತು. ಇದು ಸಾಲದೆಂಬಂತೆ ಕಾಂಗ್ರೆಸ್ ಪಕ್ಷದ ನಾಯಕಿ ಸ್ವತಃ ಪ್ರಧಾನಿಯವರ ಮೇಲೆ ಒತ್ತಡ ತಂದು ಸರ್ಕಾರದ ಆ ಉದ್ದೇಶವನ್ನು ಪೂರ್ಣವಾಗಿ ಕೈ ಬಿಡುವಂತೆ ಮಾಡಿದರು. ಆಗ ಪ್ರಧಾನಿಯವರೂ ಅರ್ಥಮಂತ್ರಿಯವರೂ ಅತೀವ ಬೇಸರಗೊಂಡು ರಾಜೀನಾಮೆ ಸಲ್ಲಿಸಲು ಮುಂದಾದರು. ಈ ಸುದ್ದಿ ಕಾಳ್ಗಿಚ್ಚಿನಂತೆ ಹರಡಿತು. ಅಷ್ಟೇ ಅಲ್ಲ, ತಮ್ಮ ಸರ್ಕಾರದ ಬಗ್ಗೆ ಅಷ್ಟೊಂದು ಅಸಂತೋಷ ಹೊಂದಿದ್ದರೆ ತಮ್ಮ ಬೆಂಬಲವನ್ನು ಹಿಂದೆಗೆದುಕೊಳ್ಳಬಹುದೆಂದು ಸಿ.ಪಿ.ಐ.ನ ನಾಯಕ ಡಿ.ರಾಜಾರವರಿಗೆ ಪ್ರಧಾನಿ ತಿಳಿಸಿದರು. ೨೦೦೪ ಮೇ ೨೫ ರಲ್ಲಿ ಕೇಂದ್ರದಲ್ಲಿ ಸುಮಾರು ೧೧ ಪಕ್ಷಗಳನ್ನೊಳಗೊಂಡ ಸಮ್ಮಿಶ್ರ ಸರ್ಕಾರ

ಸ್ಥಾಪಿತಗೊಂಡಿತು. ಅಂದಿನಿಂದ ಇಲ್ಲಿಯವರೆಗೆ ಕಾಂಗ್ರೆಸ್ ನೇತೃತ್ವದ ಸರ್ಕಾರ ತನ್ನ ಅಧಿಕಾರದ ಸುಭದ್ರತೆಯ ಕುರಿತು ನಿದ್ರೆಯಿಲ್ಲದ ರಾತ್ರಿಗಳನ್ನು ಕಳೆದಿದೆ. ಸಮ್ಮಿಶ್ರ ಸರ್ಕಾರದಲ್ಲಿ ಪಾಲ್ಗೊಂಡಿರುವ ಸದಸ್ಯ ಪಕ್ಷಗಳೆಲ್ಲ ಒಂದು ಸಾಮಾನ್ಯ ಕನಿಷ್ಟ ಕಾರ್ಯಕ್ರಮವನ್ನು ರೂಪಿಸಿಕೊಂಡವು. ಆದರೆ ಈ ಸರ್ವಸಮ್ಮತ ಸಾಮಾನ್ಯ ಕಾರ್ಯಕ್ರಮವೇ ಸರ್ಕಾರದ ಸುಗಮ ಕಾರ್ಯಾಚರಣೆಗೆ ತಡೆಯಾಗಹತ್ತಿತು. ಸಮ್ಮಿಶ್ರ ಸರ್ಕಾರದ ಎಲ್ಲ ಸದಸ್ಯ ಪಕ್ಷಗಳನ್ನು ಕೂಡಿಡಬೇಕಾದ ಸಾಮಾನ್ಯ ಕಾರ್ಯಕ್ರಮವೇ ಸರ್ಕಾರದ ಕಾಲೆಳೆಯಲು ನಿಮಿತ್ತವಾಗುತ್ತ ಬಂದಿತು. ಈ ಹಗ್ಗದಾಟ ಎಲ್ಲಿಯವರೆಗೆ ಹೋಗಿದೆ ಎಂದರೆ ಪ್ರಧಾನಿ ಮನಮೋಹನ್ ಸಿಂಗ್ ಇದುವರೆಗಿನ ಪ್ರಧಾನಿಗಳಲ್ಲಿ ಅತ್ಯಂತ ದುರ್ಬಲ ಪ್ರಧಾನಿಯೆಂಬ ಹಣೆಪಟ್ಟಿ ಪಡೆದುಕೊಳ್ಳುವವರೆಗೆ ಹೋಗಿದೆ. ಈ ಮಾತು ರಾಜಕೀಯ ವಲಯದಲ್ಲಿ ಸರ್ವೆಸಾಮಾನ್ಯವಾಗಿದೆ.

ಸಮ್ಮಿಶ್ರ ಸರ್ಕಾರದ ಕಾರಣದಿಂದಾಗಿ ಕೇಂದ್ರದಲ್ಲಿ ಈ ಪರಿಸ್ಥಿತಿ ಇದ್ದರೆ ಸಮ್ಮಿಶ್ರ ಸರ್ಕಾರ ಇರುವ ಇತರೆ ರಾಜ್ಯಗಳಲ್ಲಿ ಪರಿಸ್ಥಿತಿ ಏನೂ ಭಿನ್ನವಾಗಿಲ್ಲ. ಸಮ್ಮಿಶ್ರ ಸರ್ಕಾರಗಳಲ್ಲಿ ಪ್ರಮುಖವಾಗಿ ಭಾಗಿಯಾಗಿರುವ ಬಲಪಂಥೀಯ ಮತ್ತು ಎಡಪಂಥಿಯ ಪಕ್ಷಗಳು ಅಹರ್ನಿಶಿ ತಾವು ಭಾಗಿಯಾಗಿರುವ ಅಥವಾ ಹೊರಗಿನಿಂದ ಸಮರ್ಥಿಸುತ್ತಿರುವ ಸಕಾರವನ್ನು ಬೀಳಿಸುವ ಉದ್ಯೋಗದಲ್ಲಿಯೇ ತೊಡಗಿವೆ. "ಒಲ್ಲದ ಗಂಡನಿಗೆ ಮೊಸರಲ್ಲಿ ಕಲ್ಲು"ಎಂಬ ಗಾದೆಯನ್ನು ನಿಜ ಮಾಡಲು ಆ ಪಕ್ಷಗಳು ಹೊರಟಿವೆ. ಕರ್ನಾಟಕದ ಮಟ್ಟಿಗಂತೂ ಸರ್ಕಾರವು ತನ್ನೆಲ್ಲ ಘನತೆ-ಗಾಂಭೀರ್ಯತೆ-ದಕ್ಷತೆಯನ್ನು ಕಳೆದುಕೊಂಡಿದೆ. ಮಧ್ಯಾವಧಿಯ ಚುನಾವಣೆಯ ಸಿದ್ಧತೆಯನ್ನು ಎಲ್ಲ ಪಕ್ಷಗಳೂ ಮಾಡಿಕೊಳ್ಳುತ್ತಿವೆ. ಸಮ್ಮಿಶ್ರ ಸರ್ಕಾರಗಳು ಸ್ಥಾಪನೆಯಾಗಲು ಪ್ರಾರಂಭವಾದಾಗಿನಿಂದಲೂ ದೇಶದ ಒಟ್ಟಾರೆ ಆಡಳಿತದಲ್ಲಿ ಶಿಥಿಲತೆಯುಂಟಾಗಿದೆ, ಅಲ್ಪ ಮತದ ಬಲದ ಆಧಾರದ ಮೇಲೆ ಸರ್ಕಾರ ರಚಿಸಿರುವ ಪಕ್ಷ ಸದಾ ಅಧಿಕಾರದ ಸಮತೋಲನ ಕ್ರಿಯೆಯಲ್ಲಿಯೇ ತನ್ನೆಲ್ಲ ಬುದ್ಧಿಮತ್ತೆ, ಮತ್ತು ಸಮಯವನ್ನು ಉಪಯೋಗಿಸಬೇಕಾಗಿ ಬಂದಿರುವುದರಿಂದ ದೇಶದ ನಿಜವಾದ ಅಭಿವೃದ್ಧಿ ಸ್ಥಗಿತಗೊಂಡಿದೆ, ಆಡಳಿತ ಯಂತ್ರ ಮಾತ್ರ ತಿರುಗುತ್ತಿದೆಯೇ ಹೊರತು ಸರ್ಕಾರ ನಿಷ್ಕ್ರಿಯವಾಗಿಯೇ ಉಳಿದಿದೆ. ಸಮ್ಮಿಶ್ರ ಸರ್ಕಾರವೆಂದರೆ ಅದರ ಪಾಪಕ್ಕೆ ತಾವು ಹೊಣೆಯಲ್ಲ, ಅದರ ಪುಣ್ಯದಲ್ಲಿ ಮಾತ್ರ ಪಾಲುದಾರರು ಎಂಬ ಧೋರಣೆಯನ್ನು ಹೊಂದಿರುವ ರಾಜಕೀಯ ಪಕ್ಷಗಳ ತತ್ವರಹಿತ ಅಧಿಕಾರಶಾಹಿ.

ಸಮ್ಮಿಶ್ರ ಸರ್ಕಾರವೆಂದರೆ ಪರೋಕ್ಷವಾಗಿ ದೇಶದಲ್ಲಿಯ ಅನೈತಿಕತೆಯ ಸಂಕೇತ; ದೇಶದ ಮತದಾರನ ಅಪ್ರೌಢಿಮೆಯ ಪ್ರದರ್ಶನ. ಪರಿಣಾಮ ಪ್ರಜಾತಂತ್ರದ ಆರೋಗ್ಯಕರ ಬೆಳವಣಿಗೆಗೆ ಅಪಾಯ. ಅದರ ಲಕ್ಷಣಗಳು ಸ್ಪಷ್ಟವಾಗಿ ಗೋಚರಿಸುತ್ತಲಿವೆ. ಕೇಂದ್ರದಲ್ಲಿ ಸಮ್ಮಿಶ್ರ ಸರ್ಕಾರವಿರುವುದರಿಂದ ಪರಸ್ಪರ

ಕಾಲೆಳೆಯುವ ರಾಜಕೀಯ ಧೋರಣೆಯಿಂದಾಗಿ ಈಗ ಒಂದುದಿನದ ಸಂಸತ್ತಿನ ಖರ್ಚು ೧,೨೩,೦೦೦೦ಳ ಆಗುತ್ತಿದೆ! ಒಬ್ಬ ಲಕ್ಷ್ಮೀಮಿತ್ತಲ್‌ನ ಬಂಡವಾಳಶಾಹಿ ಯಶಸ್ಸಿನ ಗಾಥೆಯನ್ನೇ ವೈಭವಿಕರಿಸಿ ದೇಶದೊಳಗಿನ ಆರ್ಥಿಕ ವಿಷಮತೆಯನ್ನು ಕಡೆಗಣಿಸಲಾಗುತ್ತಿದೆ. ಅಲ್ಲದೆ, ಇಡೀ ದೇಶವನ್ನೆ ಬಂಡವಾಳಶಾಹಿ ದೇಶವನ್ನಾಗಿ ಮಾಡುವುದರಲ್ಲಿಯೇ ಭಾರತದ ಮೋಕ್ಷವಿದೆಯೆಂಬ ಭ್ರಮೆಯನ್ನು ಜನ ಮಾನಸದಲ್ಲಿ ವ್ಯವಸ್ಥಿತವಾಗಿ ನಿರ್ಮಾಣಮಾಡಲಾಗುತ್ತಿದೆ. ಆ ನಿಟ್ಟಿನಲ್ಲಿಯೇ ದೇಶದ ಎಲ್ಲ ಯೋಜನೆಗಳು ಸಾಗಿವೆ ಮತ್ತು ರಾಷ್ಟ್ರನಾಯಕರ ಘೋಷಣೆಯಾಗಿರುತ್ತದೆ. ಆದಾಗ್ಯೂ ಮನಮೋಹನ್ ಸಿಂಗ್‌ರವರೇ ಹೇಳಿದಂತೆ ಭಾರತದ ಬಹು ಅಲ್ಪ ಸಂಖ್ಯೆಯ ಜನರು ಮಾತ್ರ ಪಾಶ್ಚಿಮಾತ್ಯ ಮಾದರಿಯ ಜೀವನ ಮಟ್ಟವನ್ನೂ ಮತ್ತು ಕೊಳ್ಳುವ ಸಂಸ್ಕೃತಿಯನ್ನೂ ಹೊಂದಬಲ್ಲರು. ಮಿತ್ತಲ್, ನಾರಾಯಣಮೂರ್ತಿ, ಪ್ರೇಮ್‌ಜಿ, ಭಾರತೀಯರ ಈಗಿನ ನಿಜವಾದ ಜೀವನ ವಿಧಾನವನ್ನು ಪ್ರತಿಬಿಂಬಿಸಲಾರರು, ಬಡತನದ ರೇಖೆಯ ಮಟ್ಟವನ್ನು ಇತ್ತೀಚೆಗೆ ಏರಿಸಿದ್ದರೂ ಕೂಡ ಇನ್ನೂ ಮೂವತ್ತೆಂಟು ಕೋಟಿ ಜನರು ಒಂದು ದಿನಕ್ಕೆ ಒಂದು ಡಾಲರ್ ಅಂದರೆ ಐವತ್ತು ರೂಪಾಯಿಗಳಿಗಿಂತಲೂ ಕಡಿಮೆ ಆದಾಯದಲ್ಲಿ ಜೀವಿಸುತ್ತಾರೆ. ೧೯೯೩ ರಿಂದ ೨೦೦೩ ರ ಅವಧಿ ಯೊಳಗೆ ಒಂದು ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ನಗರ ಜೀವನದ ಅರ್ಥವ್ಯವಸ್ಥೆಯಿಂದ ವಂಚಿತರಾಗಿರುವ ಜನರ ಅಸಂತೋಷದ ಲಾಭ ಪಡೆಯುವ ಹಿಂಸಾಪ್ರಧಾನವಾದ ಸಂಘಟನೆಗಳು ದೇಶದ ಅನೇಕ ಪ್ರದೇಶಗಳಲ್ಲಿ ತಲೆ ಎತ್ತಿವೆ. ಕೆಲ ಪ್ರದೇಶಗಳಲ್ಲಿಯಂತೂ ಆಡಳಿತ ಯಂತ್ರ ಕುಸಿದಿದೆ. ಹೊಸ ಅರ್ಥ ವ್ಯವಸ್ಥೆಯೆಂದು ಕರೆಯಲಾಗುತ್ತಿರುವ ಪದ್ಧತಿಯಲ್ಲಿ ನಿರುದ್ಯೋಗವೇ ಹೆಚ್ಚಾಗಿದೆ. ನಲ್ವತ್ತು ಕೋಟಿ ಉದ್ಯೋಗಯೋಗ್ಯ ಜನರಲ್ಲಿ ಕೇವಲ ಒಂದು ಕೋಟಿ ಮೂವತ್ತು ಲಕ್ಷ ಜನರು ಮಾತ್ರ ಮಾಹಿತಿ ತಂತ್ರಜ್ಞಾನ ಹಾಗೂ ವಾಣಿಜ್ಯಾಧಾರಿತ ಉದ್ಯೋಗದಲ್ಲಿ ಕೆಲಸ ಪಡೆದಿದ್ದಾರೆ. ಶ್ರಮ ಆಧಾರಿತ ಉತ್ಪಾದನಾ ವಿಧಾನದ ಅರ್ಥ ನೀತಿ ನಮ್ಮ ದೇಶದಲ್ಲಿ ಇದುವರೆಗೂ ಹೊಮ್ಮಲೇ ಇಲ್ಲ. ಆದರೆ ಇಂಥ ಅರ್ಥನೀತಿಯ ಬಲದಿಂದಲೇ ಕೆಲ ಅಭಿವೃದ್ಧಿಶೀಲ ದೇಶಗಳು ಮತ್ತು ಅಭಿವೃದ್ಧಿ ಹೊಂದಿದ ದೇಶಗಳು ಮುಂದೆ ಬಂದಿವೆ. ಇಂಥ ಉಪಯುಕ್ತ ನೀತಿಯನ್ನು ಅಳವಡಿಸಿಕೊಳ್ಳಬೇಕೆಂಬುದನ್ನೇ ಮರೆತು ಕೂತಿದ್ದೇವೆ. ಆದ್ದರಿಂದ ಭಾರತ ಈಗಲೂ ರಫ್ತಿಗಿಂತ ಆಮದನ್ನೇ ಹೆಚ್ಚಾಗಿ ಮಾಡಿಕೊಳ್ಳುತ್ತಿದೆ.

ರಾಜಕೀಯ ಶಾಸ್ತ್ರದ ಪ್ರಕಾರ ಸಮ್ಮಿಶ್ರ ಸರ್ಕಾರ ಬಹು ಪಕ್ಷಿಯ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಬೇಡವಾಗಿದ್ದರೂ ಅನಿವಾರ್ಯವಾಗಿ ಸಂಭವಿಸುವ ರಾಜಕೀಯ ಬೆಳವಣಿಗೆಯೆಂದು ಭಾವಿಸಲಾಗುತ್ತದೆ. ೧೯೬೭ರಲ್ಲಿ ನೆಹರೂ ನೇತೃತ್ವದ ಕಾಂಗ್ರೆಸ್ ಪಕ್ಷದ ದೈತ್ಯ ಬಹುಮತದ ರಾಜ್ಯಭಾರ ಕೊನೆಗೊಂಡ ಮೇಲೆ ನಿಧಾನವಾಗಿ ಸಮ್ಮಿಶ್ರ ಸರ್ಕಾರದ ರಚನೆಯ ಪರಂಪರೆ ದೇಶದಲ್ಲಿ ಪ್ರಾರಂಭವಾಯಿತು. ಈ

ಪರಂಪರೆಯ ಮೋಹ ಎಷ್ಟೊಂದು ತೀವ್ರವಾಯಿತೆಂದರೆ ಕೇವಲ ಏಕಪಕ್ಷಿಯ ಅಥವಾ ದ್ವಿಪಕ್ಷಿಯ ಪ್ರಜಾತಂತ್ರವನ್ನು ಜಾರಿಗೆ ತರಬೇಕೆಂಬ ವಿಚಾರವೇ ಬುದ್ಧಿಯಿಂದ ಹಾರಿಹೋಯಿತು. ಯಾವ ಇಂಗ್ಲೆಂಡ್ ದೇಶದಿಂದ ಪ್ರಜಾತಂತ್ರ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲು ಪ್ರೇರಣೆ ಪಡೆಯಿತೊ, ಯಾವ ಅಮೇರಿಕಾ ದೇಶದ ಪ್ರಜಾತಂತ್ರ ವ್ಯವಸ್ಥೆಯಿಂದ ಪ್ರಭಾವಗೊಂಡಿತೋ ಆ ದೇಶಗಳಲ್ಲಿಯ ದ್ವಿಪಕ್ಷೀಯ ಅಥವಾ ತ್ರಿಪಕ್ಷಿಯ ಪಜಾತಂತ್ರ ವ್ಯವಸ್ಥೆಯನ್ನು ನಮ್ಮ ದೇಶದಲ್ಲಿ ರೂಪಿಸಿಕೊಳ್ಳಲು ನಮ್ಮ ದೇಶದ ರಾಜಕೀಯ ಮುಖಂಡರು ಸಂಪೂರ್ಣವಾಗಿ ವಿಫಲರಾದರು. ಈಗಲೂ ಅಂಥ ವ್ಯವಸ್ಥೆಯ ನಿರ್ಮಾಣಕ್ಕಾಗಿ ಯಾವ ರಚನಾತ್ಮಕ ಪ್ರಯತ್ನ ನಡೆಯದೇ ಇರುವುದು ನಮ್ಮ ದೇಶದ ಪ್ರಜಾತಂತ್ರ ವ್ಯವಸ್ಥೆಯ ಭವಿಷ್ಯದ ಬಗ್ಗೆ ಚಿಂತೆ ಮೂಡಿಸುತ್ತದೆ.

ಸಮ್ಮಿಶ್ರ ಸರ್ಕಾರದ ರಚನೆಗೆ ಮುಖ್ಯವಾಗಿ ಮತದಾರರ ರಾಜಕೀಯ ಅಜ್ಞಾನ, ದೇಶದ ಸಮಾಜ ವ್ಯವಸ್ಥೆಯ ಸಂಕೀರ್ಣತೆ, ಕದಡಿದ ನೀರಿನಲ್ಲಿ ಮೀನು ಹಿಡಿಯಬೇಕೆಂಬ ರಾಜಕೀಯ ಮನೋವೃತ್ತಿ, ಬಡತನ, ಅನಕ್ಷರತೆ ಇತ್ಯಾದಿ. ಇವೆಲ್ಲಕ್ಕಿಂತ ಬಲವತ್ತರವಾದ ಕಾರಣ ಮತದಾರರಲ್ಲಿ ಸಂಘಟನೆ ಇಲ್ಲದೇ ಇರುವುದು ಹಾಗೂ ರಾಜಕಾರಣಿಗಳಲ್ಲಿ ರಾಜಕೀಯ ಸ್ವಾತಂತ್ರ್ಯದ ಗಡಿಯಾಚೆಯ ಗುರಿಗಳ ಬಗ್ಗೆ ಯಾವ ಮುನ್ನೋಟವೂ ಇಲ್ಲದೇ ಇರುವುದು. ೧೯೪೭ರ ಪೂರ್ವದಲ್ಲಿ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆದರೆ, ೪೭ರ ನಂತರ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಹೋರಾಟ, ಆದರೆ ಸ್ವಾತಂತ್ರ್ಯ ದೊರೆತಮೇಲೆ ದೇಶ ನಿರ್ಮಾಣದ ಮುಂದಣ ಕಾರ್ಯವಿಧಾನ ಹೇಗೆ ಎಂಬುದರ ಬಗ್ಗೆ ದೇಶದ ನಾಯಕರು ಯೋಚನೆ ಮಾಡಲೇ ಇಲ್ಲ. ಅಧಿಕಾರದಾಹದ ರಾಜಕಾರಣದ ಭರಾಟೆಯಲ್ಲಿ ಎಲ್ಲ ರಾಜಕೀಯ ಪಕ್ಷಗಳು ತಮ್ಮ-ತಮ್ಮದೇ ಆದ ಕೂಪಗಳಲ್ಲಿ ಬಿದ್ದವು. ಹೊರಗಿನ ಬೃಹತ್ ರಾಷ್ಟ್ರವನ್ನು ಅವು ನೋಡಲೇ ಇಲ್ಲ. ಆದ್ದರಿಂದ ಸ್ವಾತಂತ್ರ್ಯನ ತರುಣದಲ್ಲಿದ್ದ ಕೆಲ ರಾಷ್ಟ್ರೀಯ ಪಕ್ಷಗಳು ಚುನಾವಣೆಗಳು ನಡೆದಂತೆಲ್ಲ ಕುಬ್ಜವಾಗುತ್ತ ಬಂದವು. ಸಮ್ಮಿಶ್ರ ಸರ್ಕಾರಗಳಲ್ಲಿ ಹಿಂದಿನ ಸಾಲಿನ ವಿದ್ಯಾರ್ಥಿಯಾಗಿರುವುದರಲ್ಲಿಯೇ ಅವು ತೃಪ್ತಿ ಪಡೆಯುತ್ತಾ ಬಂದವು. ೨೦೦೪ರಲ್ಲಿ ನಡೆದ ಚುನಾವಣೆಯಲ್ಲಿ "ಭಾರತ ಪ್ರಕಾಶಿಸುತ್ತಿದೆ" ಎಂಬ ಘೋಷಣೆಯೊಂದಿಗೆ ಚುನಾವಣೆ ಕಣಕ್ಕೆ ಇಳಿದ ಅಂದಿನ ಆಡಳಿತಾರೂಢ ಪಕ್ಷದ ಪೊಳ್ಳು ಮಾತು ಸುಳ್ಳು ಘೋಷಣೆಗಳಿಂದ ಬೇಸತ್ತಿದ್ದ ಜನರು ಆ ಪಕ್ಷಕ್ಕೆ ಮಣ್ಣು ತಿನ್ನಿಸಿದರು. ಭಾರತ ಪ್ರಕಾಶಿಸುತ್ತಿಲ್ಲ, ಕತ್ತಲಲ್ಲಿದೆ ಎಂದು ಮತದಾರರು ತೋರಿಸಿದರು.

ಸಮ್ಮಿಶ್ರ ಸರ್ಕಾರಗಳು ಅಸ್ತಿತ್ವಕ್ಕೆ ಬರುವುದಕ್ಕೂ, ಜಾಗತಿಕರಣದ ಬಿರುಸಾದ ದಾಳಿ ಪ್ರಾರಂಭವಾಗುವುದಕ್ಕೂ ತಾಳೆ ಆಯಿತು. ಸಾಮಾನ್ಯ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ ತ್ರಿವಿಕ್ರಮನಂತೆ ಬೆಳೆಯಲು ಪ್ರಾರಂಭಿಸಿದವು. ಇದರ ಪರಿಣಾಮವಾಗಿ ಇದುವರೆಗೆ ಗೋಲಾಕಾರದಲ್ಲಿದ್ದ ವಿಶ್ವ ತಂತ್ರಜ್ಞಾನಗಳ ಕಾರಣದಿಂದ

ಚಪ್ಪಟೆಯಾಯಿತು.

ಇಂಥ ಚಮತ್ಕಾರ ಹೇಗೆ ಸಾಧಿತವಾಯಿತೆಂಬುದನ್ನು ವಿಶ್ವದ ಪ್ರಸಿದ್ಧ ಪತ್ರಕರ್ತನಾದ ಥಾಮಸ್ ಎಲ್ ಫ್ರೈಡಮನ್ ತನ್ನ ದಿ.ವರ್ಲ್ಡ್ ಇಸ್ ಫ್ಲಾಟ್ ಎಂಬ ಪುಸ್ತಕದಲ್ಲಿ ಸವಿಸ್ತಾರವಾಗಿ ಹೇಳಿದ್ದಾನೆ. ಈ ತಂತ್ರಜ್ಞಾನಗಳ ವಿಸ್ತಾರಕ್ಕೆ ಕೊನೆಯೇ ಇಲ್ಲ ಎಂಬುದನ್ನು "ದೇವರು ಸೃಷ್ಟಿಯನ್ನು ಆರು ದಿನಗಳ ಕಾಲ ಸೃಷ್ಟಿಸಿ ಏಳನೇ ದಿನ ವಿಶ್ರಾಂತಿ ತೆಗೆದುಕೊಂಡ" ಎಂದು ಬೈಬಲ್‌ನಲ್ಲಿ ಹೇಳಿದ ಮಾತು ವಿಶ್ವ ಚಪ್ಪಟೆಯಾಗುತ್ತಿರುವ ಪ್ರಕ್ರಿಯೆಗೆ ಅನ್ವಯಿಸುವುದಿಲ್ಲ. ಎಂದು ಹೇಳುತ್ತಾನೆ. ಮುಂದೆ ಇದು ನಿರಂತರ ಪ್ರಕ್ರಿಯೆ ಎಂಬುದೇ ಈ ಮಾತಿನ ಒಳರ್ಥ. ಜಗತ್ತಿನ ಬದಲಾವಣೆಯ ಗತಿ ಇಷ್ಟು ತೀವ್ರವಾಗಿರುವಾಗ ಸಮ್ಮಿಶ್ರ ಸರ್ಕಾರಗಳು ಪ್ರಗತಿಯೆಂಬ ಗೂಳಿಯ ಕತ್ತಿಗೆ ಕಟ್ಟಿದ ತೊಡರು ಕೋಲಾಗಿವೆ. ಸಮ್ಮಿಶ್ರ ಸರ್ಕಾರಗಳಲ್ಲಿಯ ಸದಸ್ಯ ಪಕ್ಷಗಳು ಸರ್ಕಾರವನ್ನು ಹತ್ತು ದಿಕ್ಕಿಗೆ ಎಳೆಯುತ್ತಿವೆ. ಶಾಸ್ತ್ರಗಳು ಹೇಳುವಂತೆ, "ಐದು ಇಂದ್ರೀಯಗಳೂ ತಮತಮಗೆ ಬೇಕಾದುದನ್ನು ಹುಡುಕಿಕೊಂಡು ಐದು ದಿಕ್ಕುಗಳಿಗೆ ಎಳೆದರೆ ರಥದ ಗತಿಯೇನು? ರಥಿಕನ ಗತಿಯೇನು?"

ಇಂಥ ಪ್ರಶ್ನೆಯೇ ಸಮ್ಮಿಶ್ರ ಸರ್ಕಾರಗಳಿಗೂ ಅನ್ವಯಿಸುತ್ತದೆ. ಕೆಂದ್ರ ಸರ್ಕಾರ ವೊದಲ್ಗೊಂಡು ಬಹುಶಃ ಎಲ್ಲ ರಾಜ್ಯದಲ್ಲಿ ಸಮ್ಮಿಶ್ರ ಸರ್ಕಾರಗಳಿರುವುದರಿಂದ ದೇಶದಲ್ಲಿ ರಾಷ್ಟ್ರೀಯತೆಯ ಭಾವನೆ ಕುಂಠಿತವಾಗುತ್ತಿದೆ. ಕೇಂದ್ರ ಸರ್ಕಾರದಿಂದ ಹೆಚ್ಚು-ಹೆಚ್ಚು ಧನಸಹಾಯ ಪಡೆಯುವುದರಲ್ಲಿ ರಾಜ್ಯಗಳ ಮಧ್ಯೆ ಅಹಿತಕರ ಪೈಪೋಟಿ ನಡದಿದೆ.

ಸಮ್ಮಿಶ್ರ ಸರ್ಕಾರಗಳಲ್ಲಿಯ ಅಸ್ಥಿರತೆಯ ಕಾರಣದಿಂದ ಮಧ್ಯಂತರ ಚುನಾವಣೆಯ ಸಂಭವ ಯಾವಾಗಲೂ ಇರುತ್ತದೆ. ಎಲ್ಲರಿಗೂ ಗೊತ್ತಿರುವಂತೆ ಪ್ರತಿಯೊಂದು ಚುನಾವಣೆಯೂ ಸರ್ಕಾರದ ಖಜಾನೆಯ ಮೇಲೆ ಆರ್ಥಿಕವಾಗಿ ಬಹಳ ಭಾರವನ್ನು ಹಾಕುತ್ತದೆ. ಜೊತೆಗೆ ರಾಜಕೀಯ ಪಕ್ಷಗಳೂ ಸಹ ಅನೈತಿಕವಾಗಿ ಹಣದ ಹೊಳೆಯನ್ನೇ ಹರಿಸುತ್ತವೆ.

ಇಂಥ ಹಲವಾರು ರಾಜಕೀಯ, ಸಾಮಾಜಿಕ ಮತ್ತು ಅಭಿವೃದ್ಧಿಯ ಕಾರಣಗಳಿಂದಾಗಿ ಬರುವ ದಶಕಗಳಲ್ಲಂತೂ ಸಮ್ಮಿಶ್ರ ಸರ್ಕಾರಗಳು ಭಾರತದ ಪ್ರಗತಿಗೆ ಸಾಧಕವಾಗಿಲ್ಲವೆಂಬುದು ಸಿದ್ಧವಾಗುತ್ತದೆ. ಆದ್ದರಿಂದ ದೇಶದ ರಾಜಕೀಯದ ಹಣೆಬರಹವನ್ನು ಬರೆಯುವ ಮತದಾರನು ಈಗ ಎಚ್ಚೆತ್ತುಕೊಳ್ಳಬೇಕಾಗಿದೆ. ಮುಂದಿನ ಚುನಾವಣೆಗಳಲ್ಲಿ ಸಾಧ್ಯವಾದಷ್ಟು ಪ್ರಾದೇಶಿಕ ಹಾಗೂ ಸೀಮಿತ ಉದ್ದೇಶದ ರಾಜಕೀಯ ಪಕ್ಷಗಳಿಗೆ ಮತವನ್ನು ಕೊಡದೆ ಸಂವಿಧಾನದ ಆಶೋತ್ತರಗಳಿಗೆ ಬೆಂಬಲವಾಗಿ ನಿಲ್ಲುವ ರಾಷ್ಟ್ರೀಯ ಪಕ್ಷಗಳಿಗೆ ಮಾತ್ರ ಮತ ಕೊಡುವ ಸಂಕಲ್ಪ ಮಾಡಬೇಕು. ಮತದಾರರು ಹೋಬಳಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಸಂಘಟಿತರಾಗಬೇಕು. ತಮ್ಮ ರಾಜಕೀಯ ತಿಳುವಳಿಕೆಯನ್ನು ಹೆಚ್ಚಿಸಿಕೊಳ್ಳುವ ಅಗತ್ಯವಾದ ಕಾರ್ಯಕ್ರಮಗಳನ್ನೂ ಪಕ್ಷಾತೀತವಾಗಿ ಏರ್ಪಡಿಸಿಕೊಳ್ಳಬೇಕು. ಈ

ಉದ್ದೇಶಕ್ಕಾಗಿಯೇ ಪಕ್ಷಾತೀತವಾದ ಮತದಾರರ ಒಂದು ಸ್ವಯಂ ಸೇವಾ ಸಂಸ್ಥೆಯನ್ನು ರಚಿಸಿಕೊಳ್ಳಲೂಬಹುದು. ಸಮ್ಮಿಶ್ರ ಸರ್ಕಾರಗಳು ಸ್ವಾತಂತ್ರ್ಯದ ನಿಜವಾದ ಗುರಿಯಾದ ಸ್ವರಾಜ್ಯ ಸ್ಥಾಪನೆಯ ಉದ್ದೇಶವನ್ನು ಮರೆತು ಬಿಟ್ಟಿವೆ. ಹಾಗಾಗಿ ಸಮ್ಮಿಶ್ರ ಸರ್ಕಾರಗಳು ದೇಶವನ್ನು ಬಂಡವಾಳಶಾಹಿ ಮಾರ್ಗದ ಮೂಲಕ ತನ್ನನ್ನೆ ತಾನು ಅಭಿವೃದ್ಧಿ ಹೊಂದಿದ ದೇಶಗಳ ಶೋಷಣೆಗೆ ಒಳಪಡಿಸುತ್ತಿವೆ. ಈ ದುರಂತವನ್ನು ತಪ್ಪಿಸುವ ಹೊಣೆ ಮತದಾರನ ಮೇಲಿದೆ. ಸ್ವರಾಜ್ಯಶಾಸ್ತ್ರ ಎಂಬ ಪುಸ್ತಕದ ಮುನ್ನುಡಿಯಲ್ಲಿ ವಿನೋಬಾರವರು ಹೇಳಿದ ಈ ರಾಜಕೀಯ ವಿಚಾರವನ್ನು ಮತದಾರರು ಮನನ ಮಾಡಬೇಕಾಗಿದೆ, "ರಾಜ್ಯ ಬೇರೆ, ಸ್ವರಾಜ್ಯ ಬೇರೆ. ರಾಜ್ಯವನ್ನು ಹಿಂಸೆಯಿಂದ ಕಟ್ಟಬಹುದು, ನಡೆಸಬಹುದು ಆದರೆ ಅಹಿಂಸೆಯಿಲ್ಲದೆ ಸ್ವರಾಜ್ಯ ಸಾಧ್ಯವಿಲ್ಲ. ಆದುದರಿಂದ ವಿಚಾರವಂತರಿಗೆ ಬರಿ ರಾಜ್ಯ ಬೇಕಿಲ್ಲ. ಸ್ವರಾಜ್ಯಕ್ಕಾಗಿ ಎಲ್ಲರೂ ಪ್ರಯತ್ನಿಸಲಿ ಎಂದು ಅವರು ತಳಮಳಿಸುತ್ತಿದ್ದಾರೆ".

***

ಆಟಗಳ ಸರಮಾಲೆ

ಮೀಸಲಾತಿಗಾಗಿ ಹೋರಾಟ
ಉಚಿತ ಶಿಕ್ಷಣಕ್ಕಾಗಿ ಹೋರಾಟ
'ಕ್ಯಾರಿ ಓವರ್ ಸಿಸ್ಟಂ'ಗಾಗಿ ಹೋರಾಟ
ಕೃಪಾಂಕಕ್ಕಾಗಿ ಕಿರುಚಾಟ
ವೃತ್ತಿ ಶಿಕ್ಷಣಕ್ಕಾಗಿ ಜಂಜಾಟ
ಶಿಕ್ಷಣ ತಜ್ಞರ ಗೊಣಗಾಟ
ಉದ್ಯೋಗಕ್ಕಾಗಿ ಅಲೆದಾಟ
ವೇತನಕ್ಕಾಗಿ ಸೆಣಸಾಟ
ಉದ್ಯಮಿಗಳಿಗೆ ಪೀಕಲಾಟ
ಮುಚ್ಚಿದ ಬಾಗಿಲ ಬಡಿದಾಟ
ಆಯಿತು ಕಷ್ಟ ಉಸಿರಾಟ
ಸಾಯೋತನಕ ಶನಿಕಾಟ
ಬದುಕೆಲ್ಲಾ ಬರೀ ಗೋಳಾಟ
ನೆಮ್ಮದಿಗಾಗಿ ಹುಡುಕಾಟ
ಹೀಗೆ ಮುಗಿಯಿತು ಜೀವದಾಟ

–ಎಂ.ಜಿ.ಶಿವರಾಂ.

ಆಧುನಿಕ ಹೋರಾಟಗಾರರಿಗೆ ಗಾಂಧಿ ತೋರಿದ ಮಾರ್ಗ

–ಸತ್ಯವ್ರತ

ಗಾಂಧೀಜಿ ಅಂತಿಮವಾಗಿ ದಕ್ಷಿಣ ಆಫ್ರಿಕಾ ಬಿಟ್ಟು ಭಾರತಕ್ಕೆ ಬರುವ ಮುನ್ನ ಫೀನಿಕ್ಸ್ ಆಶ್ರಮದಲ್ಲಿ ಕೊನೆಯ ಕೆಲವು ದಿನಗಳನ್ನು ಕಳೆದರು. ಆಶ್ರಮವಾಸಿಗಳ ಜೊತೆ ಸಂಭಾಷಣೆಯನ್ನು ಮಾಡುತ್ತಿದ್ದರು. ಅವು ಸಾಮಾನ್ಯವಾಗಿ ಸಾಯಂಕಾಲ ಪ್ರಾರ್ಥನೆಯಾದ ನಂತರ ನಡೆಯುತ್ತಿದ್ದವು.

ಭಾರತಕ್ಕೆ ಹಿಂತಿರುಗಿದ ಮೇಲೆ ತಾವಿರಬೇಕಾದ ಜಾಗ, ಮಾಡಬೇಕಾದ ಕೆಲಸ–ಕಾರ್ಯಗಳು, ತಮ್ಮ ರೀತಿ–ನೀತಿ, ಧರಿಸಬೇಕಾದ ವೇಷ–ಭೂಷಣ ಈ ಮುಂತಾದ ವಿಷಯಗಳು ಚರ್ಚೆಯಲ್ಲಿ ಬರುತ್ತಿದ್ದವು. ಅಂಥದೊಂದು ಸಂದರ್ಭ. ಭಾರತಕ್ಕೆ ಹಿಂತಿರುಗಿದ ಮೇಲೆ ತಾವು ಕಾಥೇವಾಡಿ ರೈತರ ವೇಷಭೂಷ ಧರಿಸುವುದಾಗಿ ಗಾಂಧೀ ಹೇಳಿದ್ದನ್ನು ನೆನಸಿಕೊಂಡು ಚರ್ಚೆ ಆರಂಭವಾಯಿತು. ಗಾಂಧೀ ಹೇಳಿದರು, 'ನಾನು ಆ ವೇಷ ಧರಿಸುವುದು ಜನತೆಯಿಂದ ದೂರವಾಗುವುದಕ್ಕಲ್ಲ. ಉಡುಪಿನ ಕಾರಣದಿಂದ ಸಾಮಾನ್ಯ ಜನತೆಯ ಸಮೀಪದಲ್ಲಿರುತ್ತೇನೆ. ಅವರ ಜೊತೆ ಏಕರೂಪವಾಗಿರುತ್ತೇನೆ, ಎಂದೆಲ್ಲ ಗಾಂಧೀಜಿ ವಿವರಿಸುತ್ತಿದ್ದಂತೆಯೇ ಒಬ್ಬ ಆಶ್ರಮವಾಸಿ ಮಧ್ಯೆ ಬಾಯಿ ಹಾಕಿ, "ಆದರೆ ಭಾರತ ನಿಮ್ಮಿಂದ ಬಯಸುವುದು ಇದನ್ನಲ್ಲ. ಅಲ್ಲಿ ಸರ್ ಫಿರೋಜ್ ಷಾ ಮೆಹತಾ, ಸುರೇಂದ್ರನಾಥ್ ಬ್ಯಾನರ್ಜಿಯಂಥ ಮೇಧಾವಿ ನಾಯಕರಿದ್ದಾರೆ. ಅವರು ಮುಂಚೂಣಿಯಲ್ಲಿದ್ದು ಕಾರ್ಯ ಮಾಡುವ ಜನ. ಅವರ ಭಾಷಣಗಳು ಸಂಸತ್‌ಭವನದಲ್ಲಿ ಪ್ರತಿಧ್ವನಿಸುತ್ತವೆ. ದೇಶದ ಜನತೆಯಲ್ಲಿ ಸ್ಫೂರ್ತಿ ಸಂಚಾರವಾಗುವಂತೆ ಮಾಡಿವೆ. ವೈಸರಾಯ್ ಸಹ ಅವರ ಭಾಷಣಗಳನ್ನು ಗಮನವಿಟ್ಟು ಕೇಳಬೇಕಾಗುತ್ತದೆ. ನೀವು ಇಲ್ಲಿ ಜಯಗಳಿಸಿ ಭಾರತಕ್ಕೆ ಹಿಂತಿರುಗುತ್ತಿದ್ದೀರಿ. ಸ್ವದೇಶದ ಸ್ವಾತಂತ್ರ್ಯಪ್ರಾಪ್ತಿಗಾಗಿ ಯೋಧರನ್ನು ನೀವು ತಂದು ಕೊಡುತ್ತೀರೆಂದು ಜನತೆ ನಿರೀಕ್ಷಿಸುತ್ತದೆ" ಎಂಬ ತನ್ನ ಅನಿಸಿಕೆಯನ್ನು ಆ ಆಶ್ರಮವಾಸಿ ಹೇಳಿದ.

"ಹೌದು, ನೀವು ಹೇಳುವುದು ಸರಿ" ಎನ್ನುತ್ತಾ ಗಾಂಧೀ "ಭಾರತ ದೇಶದ ಮುಂದೆ ನಾನು ತಂದು ನಿಲ್ಲಿಸುವಂಥ ಯೋಧರು ಹಸಿದವರಿಗೆ ತಮ್ಮ ರೊಟ್ಟಿಯ ತುಂಡನ್ನು ಕೊಟ್ಟು ಬಿಡುವರು, ಸ್ವತಃ ಉಪವಾಸ ಇರಬಲ್ಲವರು. ತಮ್ಮ ಮಾತೃಭೂಮಿಯ ಸೇವೆಗಾಗಿ ಅಗತ್ಯಬಿದ್ದಾಗ ಸೆರೆಮನೆಗೆ ಹೋಗುವವರು

ಅಥವಾ ನೇಣುಗಂಭಕ್ಕೇರಲು ಸಿದ್ಧ. ಭಾರತಕ್ಕೆ ಬೇಕಾದುದು ಧೈರ್ಯಶಾಲಿ ಸತ್ಯಾಗ್ರಹಿಗಳು. ನಿಚ್ಚಳ ಚಾರಿತ್ರ್ಯ ಮತ್ತು ತ್ಯಾಗ ಮನೋಭಾವ ಇರುವವರು ಎಂದು ಗಾಂಧೀ ಹೇಳಿದರು.

ಗಾಂಧೀಜಿಯುವರ ಮೇಲಿನ ಹೇಳಿಕೆಯಲ್ಲಿ ಮೊಟ್ಟಮೊದಲು ಗಮನಿಸಬೇಕಾದ್ದು ಅವರಲ್ಲಿದ್ದ "ಹಿಮಾಲಯ ಸದೃಶ ಆತ್ಮವಿಶ್ವಾಸ". ಆ ಅಗಾಧ ಆತ್ಮವಿಶ್ವಾಸವನ್ನು ಕಂಡು ಯಾರಿಗಾದರೂ ಆಶ್ಚರ್ಯ ಮತ್ತು ದಿಗ್ಭ್ರಮೆಯಾಗದಿರದು. ಅವರು ಸುಮಾರು ೨೧ ವರ್ಷಗಳಷ್ಟು ಕಾಲ ಭಾರತದ ಹೊರಗೇ ಇದ್ದರು. ತಾಯ್ನಾಡಿನ ಸ್ಥಿತಿಗತಿ., ಅಲ್ಲಿಯ ವಿದ್ಯಮಾನ ಮತ್ತು ಮುಖ್ಯ ವ್ಯಕ್ತಿಗಳ ನಿಕಟ ಪರಿಚಯವೇ ಇರಲಿಲ್ಲ. ಆದರೂ ಅವರಲ್ಲಿ ಅಷ್ಟು ಅಗಾಧ ಆತ್ಮ ವಿಶ್ವಾಸ! ಅದು ಅವರ ಹೇಳಿಕೆಯಷ್ಟೆ ಅಲ್ಲ, ಭವಿಷ್ಯವಾಣಿಯೂ ಆಯಿತು.

ಭಾರತಕ್ಕೆ ಹಿಂತಿರುಗಿದ ಮೇಲೆ ಗಾಂಧೀ ತಾವು ಹೇಳಿದ್ದನ್ನು ಮಾಡಿತೋರಿಸಿದರು. ಪ್ರತಿಯೊಂದು ಆಂದೋಳನದಲ್ಲಿ ಅವರು ಅಂಥ ಯೋಧರನ್ನು ತಂದು ನಿಲ್ಲಿಸಿದರು. ಜನತೆಗೆ ಗಾಂಧೀಯವರ ಯೋಧರು ಎಂಥ ಗಟ್ಟಿಗರೆಂಬುದು ತಿಳಿಯಿತು. ಮೇಲಿನ ಎಲ್ಲ ಪ್ರಶ್ನೆಗಳಿಗೂ ಉತ್ತರ ದೊರಕಿದವು. ಅವರ ಯೋಧರು ಜನತೆಯ ಮಧ್ಯದಿಂದಲೇ ಬಂದವರಿದ್ದರು. ಜನತೆಯ ಮಧ್ಯೆ ಇದ್ದುಕೊಂಡೇ, ತಮ್ಮದೇ ವಿಶಾಲ ಪ್ರಯೋಗಾಲಯಗಳಲ್ಲಿ ತರಬೇತಿ ಪಡೆದು ಗಾಂಧೀಯವರಿಂದ ದೀಕ್ಷೆ ಸ್ವೀಕರಿಸಿ ಬಂದವರಿದ್ದರು.

ಗಾಂಧೀಜಿಯವರ ಯೋಧರಲ್ಲಿ ಸಾಮಾನ್ಯರಾದವರೂ ಇದ್ದರು. ಒಮ್ಮೊಮ್ಮೆ ನೇತೃತ್ವಹೀನರಾಗಿ, ಕೆಲವೊಮ್ಮೆ ಪ್ರತಿಕಾರದ ಭಾವನೆಗೆ ವಶರಾಗಿ ದಾರಿತಪ್ಪಿ ನಡೆದುದೂ ಉಂಟು. ಹಿಂಸಾವೃತ್ತಿಗೂ ಇಳಿದರು. ಆಣತಿಯಂತೆ ಅಹಿಂಸಾವ್ರತಧಾರಿಗಳ ಸಂಕಲ್ಪ ತೊಟ್ಟು ಸತ್ಯಾಗ್ರಹಿಗಳಾದರೂ ಆಗಾಗ್ಗೆ ವ್ರತಭಂಗ ಮಾಡಿದರು. ಕಾಲೆಟಿ ಸಮಿತಿಯ ಶಿಫಾರಸ್ಸುಗಳು ಕಾನೂನಾಗುವುದನ್ನು ವಿರೋಧಿಸಿ ಜನರು ಪ್ರದರ್ಶನ ನಡೆಸುತ್ತಿದ್ದ ಸಂದರ್ಭ ಬಹು ಗಮನಾರ್ಹವಾದದ್ದು. ಅಹ್ಮಾದಾಬಾದ್ ಮತ್ತು ನಡಿಯಾಡ್‌ಗಳಲ್ಲಿ ವ್ಯಾಪಕ ಹಿಂಸಾಚಾರವಾಯಿತು. ಪರಿಣಾಮವಾಗಿ ಐವತ್ತು ಸಾವು ಮತ್ತು ೨೫೦ ಜನ ಗಾಯಗೊಂಡರು. ನಿಜಸ್ಥಿತಿಯನ್ನು ಅರಿತಾಗ ಗಾಂಧೀಜಿ ಮನನೊಂದರು. ಅವರು ಸತ್ಯಾಗ್ರಹ ಹೂಡಿದ್ದು ತಪ್ಪಾಯಿತೆಂದು ಒಪ್ಪಿಕೊಂಡರು. ಅದು 'ಹಿಮಾಲಯ ಸಮಾನ ತಪ್ಪಣಿಕೆ'ಯಿಂದ ಕೂಡಿದ್ದಾಗಿತ್ತೆಂದು ನೊಂದು ನುಡಿದರು. ಪ್ರಾಯಶ್ಚಿತಾರ್ಥ ಮೂರು ದಿನಗಳ ಉಪವಾಸ ವ್ರತ ಕೈಗೊಂಡರು. ಅದೇ ರೀತಿ ಜನತೆಗೆ ಒಂದು ದಿನದ ಉಪವಾಸ ಮತ್ತು ಕೃತ್ಯದಿಂದಾಗಿ ಸಾವು–ನೋವನ್ನನುಭವಿಸಿದ ಕುಟುಂಬಗಳಿಗೆ ಸಲ್ಲಬೇಕಾದ ಪರಿಹಾರವೆಂದು ಪ್ರತಿಯೊಬ್ಬರೂ ಎಂಟು ಆಣೆ ದಂಡ ತೆರುವಂತೆ ಕರೆಯಿತ್ತರು. ತಮ್ಮ ತಪ್ಪೊಪ್ಪಿಗೆ ಕಾರಣದಿಂದ ಲೋಕನಿಂದನೆಗೆ

ಗುರಿಯಾದರು. ಆದರೆ ಗಾಂಧೀ ಅದೆಲ್ಲವನ್ನೂ ಶಾಂತರಾಗಿ ನುಂಗಿಕೊಂಡರಷ್ಟೆ ಅಲ್ಲ, ವಿಚಲಿತರಾಗದೆ ದೊರೆತ ಈ ಅವಕಾಶವನ್ನು ಜನತೆಯ ಶಿಕ್ಷಣಕ್ಕಾಗಿ ಬಳಸಿದರು. ತನ್ಮೂಲಕ ಶ್ರೇಷ್ಠ ನಾಯಕತ್ವದ ಗುಣಲಕ್ಷಣಗಳೇನಿರಬೇಕೆಂಬುದನ್ನೂ, ನಾಯಕ ತನ್ನ ಜವಾಬ್ದಾರಿಯನ್ನು ಹೇಗೆ ನಿರ್ವಹಿಸಬೇಕಾಗುತ್ತದೆಂಬುದನ್ನೂ ಸ್ವತಃ ಮಾಡಿ ತೋರಿಸಿದರು.

ಗಾಂಧೀಜಿಯ ವಿಚಾರದಂತೆ ಒಬ್ಬ ವ್ಯಕ್ತಿ ಮನಃಪೂರ್ವಕವಾಗಿ ಸ್ವಯಂಇಚ್ಛೆಯಿಂದ ರಾಜ್ಯದ ಕಾನೂನುಗಳನ್ನು ತನ್ನ ಪವಿತ್ರ ಕರ್ತವ್ಯವೆಂದು ಭಾವಿಸಿ ಪರಿಪಾಲಿಸಿದಾಗಲೇ ಆತನಿಗೆ ರಾಜ್ಯದ ಯಾವ ಕಾನೂನು ಉಚಿತ ಯಾವುದು ಅನುಚಿತವೆಂದು ತೀರ್ಮಾನಿಸಲು ಸಾಧ್ಯವಾದೀತು. ಈ ವಿವೇಕಯುಕ್ತ ನಿರ್ಣಯ ಮಾಡಲು ಕಲಿತಾಗ ಮಾತ್ರ ಆತ ಅಸತ್ಯ ಮತ್ತು ಅನುಚಿತ ಕಾನೂನುಗಳನ್ನು ವಿರೋಧಿಸಲು ತಕ್ಕ ಅರ್ಹತೆ ಪಡೆಯುತ್ತಾನೆ ಎಂದು ಜನತೆಗೆ ತಿಳಿಸಿ ಹೇಳಿದರು. ಅದೇ ರೀತಿ ಚೌರಿಚೌರದ ಹಿಂಸಾತ್ಮಕ ಘಟನೆ ನಡೆದಾಗ ಗಾಂಧೀಜಿ ತಾತ್ಕಾಲಿಕವಾಗಿ ಸತ್ಯಾಗ್ರಹವನ್ನು ಸ್ಥಗಿತಗೊಳಿಸಿದರು. ಅದರಿಂದ ಮತ್ತೊಮ್ಮೆ ಜನನಿಂದನೆಗೊಳಗಾದರು. ಆದರೆ ಇವು ಯಾವುದಕ್ಕೂ ಅವರು ಜಗ್ಗಲಿಲ್ಲ. ಪ್ರಾಯಶ್ಚಿತ್ತ ಮಾಡಿಕೊಂಡು ಸತ್ಯಾಗ್ರಹಿಗಳಲ್ಲಿ ಸತ್ಯದ ಅಧಿಷ್ಠಾನವನ್ನೂ ದೇಶವ್ಯಾಪಿ ಚಳುವಳಿಗೆ ಅಗತ್ಯವಾದ ನೈತಿಕ ವಾತಾವರಣ ಮತ್ತು ಹಿನ್ನೆಲೆಯನ್ನೂ ಅಕ್ಷುಣ್ಣವಾಗಿಟ್ಟಿರಲು ಶ್ರಮಿಸಿದರು. ಇದೇ ಮಾರ್ಗದಿಂದ ಜನತೆಗೂ ತನ್ನ ಯೋಧರಿಗೂ ಯೋಗ್ಯಶಿಕ್ಷಣ ಮತ್ತು ತರಬೇತಿ ಕೊಟ್ಟು ಅವರನ್ನು ಅರ್ಹಯೋಧರನ್ನಾಗಿ ತಯಾರಿಸಿಕೊಂಡರು. ಬೇರೇನಾದರೂ ವಾಮಮಾರ್ಗ ಹಿಡಿದಿದ್ದರೆ ಚಳುವಳಿಗಳನ್ನು ಹತ್ತಿಕ್ಕಲು ಮತ್ತು ಪುನಃ ಅವು ತಲೆ ಎತ್ತದಂತೆ ಇಂಗ್ಲೀಷರಿಗೆ ತಕ್ಕ ಕ್ರಮಕೈಗೊಳ್ಳಲು ತಾವೇ ಆಹ್ವಾನಿಸಿದಂತಾಗುತ್ತಿತ್ತು. ಆದರೆ ಗಾಂಧೀಜಿಯ ಶ್ರೇಷ್ಠ ಮಟ್ಟದ ನಡುವಳಿಕೆಯಿಂದಾಗಿ ಇಂಗ್ಲೀಷರಿಗೆ ಅಂಥ ಯಾವ ಅವಕಾಶವೂ ದೊರೆಯದೆ ಹೋಯಿತು. ಅದಕ್ಕೆ ಪ್ರತಿಯಾಗಿ ಗಾಂಧೀಜಿಯ ಕ್ರಮಗಳಿಂದಾಗಿ ಯೋಧರೂ ಸಾಧ್ಯವಿದ್ದಷ್ಟೂ ತಿದ್ದಿಕೊಳ್ಳುತ್ತಾ ನಡೆದರು. ಯೋಧರಲ್ಲಿ ಮತ್ತು ದೇಶದಲ್ಲಿ ಗಾಂಧೀಜಿಯಿಂದಾಗಿ ಒಂದು ಬಗೆಯ ನೈತಿಕ ಭಯ ಮೂಡಿತ್ತು. ಅದು ಸಕ್ರಿಯವಾಗಿತ್ತು. ಹೀಗೆ ಸೇನಾಪತಿ ಮತ್ತು ಯೋಧರಿಬ್ಬರೂ ಕ್ರಮೇಣ ಪರಿಶುದ್ಧರಾಗುತ್ತಾಹೋದರು. ತತ್ಪರಿಣಾಮವಾಗಿ ಉಪ್ಪಿನ ಸತ್ಯಾಗ್ರಹ, ವೈಯಕ್ತಿಕ ಸತ್ಯಾಗ್ರಹಗಳೆರಡೂ ಬಹು ಮಟ್ಟಿಗೆ ಆದರ್ಶ ಸತ್ಯಾಗ್ರಹಗಳೆನಿಸಿದವು.

ಉಪ್ಪಿನ ಸತ್ಯಾಗ್ರಹದಲ್ಲಿ ಹಿಮಾಲಯ ಸದೃಶ ಆತ್ಮವಿಶ್ವಾಸ ವ್ಯಕ್ತವಾಯಿತೇ ಹೊರತು ಹಿಮಾಲಯ ಸಮಾನ ತಪ್ಪೆಣಿಕೆಯಂತೂ ಆಗಲಿಲ್ಲ. ಈ ಸತ್ಯಾಗ್ರಹ ಇಡೀ ಜಗತ್ತಿನ ಗಮನ ಸೆಳೆಯಿತು. ಮೊದಮೊದಲು ಉಪ್ಪಿನ ವಿಷಯದಲ್ಲಿ ಎಲ್ಲರೂ ಶಂಕಾಶೀಲರೇ. ಅನೇಕರು ಕುಹಕಮಾಡಿದರು. ಅವರಲ್ಲಿ ನೆಹರೂ

ಒಬ್ಬರು. ಆದರೆ ನೆಹರೂ ಆನಂತರ ಹೀಗೆನ್ನುವಂತಾಯಿತು: "ಮಣ್ಣಿನ ಮುದ್ದೆಯಂತಿರುವ ಸಾಮಾನ್ಯ ಮನುಷ್ಯನಿಗೂ ಸತ್ಯಾಗ್ರಹದ ಚೈತನ್ಯದ ಕಿಡಿ ಅನುಭವಕ್ಕೆ ಬರುತ್ತಿದೆ."

ಇನ್ನೊಂದು ಸಂದರ್ಭದಲ್ಲಿ ತಮ್ಮ ಭಾವನೆ ಹೊರಚೆಲ್ಲುತ್ತಾ ನೆಹರು, "ನನ್ನ ಮಟ್ಟಿಗೆ ಹೇಳುವುದಾದರೆ, ನಾನು ಯುದ್ಧ ಸ್ಥಿತಿಯನ್ನು ಖುಷಿಪಡುವವನು. ಏಕೆಂದರೆ ಅದು ನಾನು ಜೀವಂತವಾಗಿದ್ದೇನೆ ಎಂದು ಭಾವಿಸುವಂತೆ ಮಾಡುತ್ತದೆ. ಆದರೆ ಕಳೆದ ನಾಲ್ಕು ತಿಂಗಳುಗಳ ಘಟನಾವಳಿ ನನ್ನ ಹೃದಯ ಪುಳಕಿತಗೊಳ್ಳುವಂತೆ ಮಾಡಿವೆ. ಭಾರತೀಯ ಪುರುಷರು, ಮಹಿಳೆಯರು, ಅಷ್ಟೇಕೆ ಮಕ್ಕಳು ಸಹ ಹಿಂದೆಂದಿಗಿಂತ ಹೆಚ್ಚಾಗಿ ಇಂದು ನಾನು ಹೆಮ್ಮೆ ಪಡುವಂತೆ ಮಾಡಿದ್ದಾರೆ. ನೀವು ನಿಮ್ಮ ಮಾಯಾ ಸ್ಪರ್ಶದಿಂದ ಈ ನವ ಭಾರತವನ್ನು ಸೃಷ್ಟಿಸಿರುವುದಕ್ಕಾಗಿ ನಿಮ್ಮನ್ನು ಅಭಿನಂದಿಸಲೆ! ಎಂದು ಗಾಂಧೀಜಿಗೆ ಪತ್ರ ಬರೆದರು.

ಗಾಂಧೀಜಿಯವರ ಯೋಧರು ಪರಾಕ್ರಮದ ಪರಾಕಾಷ್ಠೆಯನ್ನು ಮುಟ್ಟಿದಾಗ ಅದು ಇಂಗ್ಲೀಷರ ಮೇಲೆ ಗಾಢ ಪ್ರಭಾವ ಬೀರಿದೆ ಬಿಡಲಿಲ್ಲ. ವೈಸ್‌ರಾಯ್ ಇರ್ವಿನ್ ಲಂಡನ್ನಿನ ಇಂಡಿಯಾ ಆಫೀಸಿಗೆ ಬರೆದ ಪತ್ರದಲ್ಲಿ "ಬ್ರಿಟನ್ ಇನ್ನು ಮುಂದೆ ಭಾರತದ ಮೇಲೆ ಆಡಳಿತ ನಡೆಸಬೇಕಾದರೆ ಭಾರತವನ್ನು ಸ್ಮಶಾನಘಟ್ಟದಂತೆ ಬದಲಿಸಿ ಆಳಬೇಕಾಗುತ್ತದೆ. ಎಂದು ಬರೆದ." ಇದು ಒಂದು ರೀತಿಯಿಂದ ಗಾಂಧೀ ಯೋಧರ ಪರಾಕ್ರಮದ ವಿಜಯೋತ್ಸವವೇ ಆಯಿತೆನ್ನಬೇಕು.

ಗಾಂಧೀಜಿಯಲ್ಲಿ ಒಂದೆಡೆ 'ಹಿಮಾಲಯ ಸದೃಶ ಆತ್ಮವಿಶ್ವಾಸ' ಇನ್ನೊಂದೆಡೆ ಹಿಮಾಲಯ ಸಮಾನ ತಪ್ಪೊಣಿಕೆ ಎರಡೂ ಇದ್ದವು. ಒಂದು ಮಹಾ ಸಂಗ್ರಾಮದ ಅಧಿಪತಿಯೂ, ಸೇನಾಪತಿಯೂ ಆಗಿರುವವನಲ್ಲಿ ಇರಬೇಕಾದ ಗುಣಗಳೇ ಇವು. ಸತ್ಯ ಅಹಿಂಸೆಗಳಂಥ ಆಧ್ಯಾತ್ಮಿಕ ಮೌಲ್ಯಗಳ ಆಧಾರ ಪಡೆದ ಸಂಗ್ರಾಮದಲ್ಲಿ ಇವೆರಡೂ ಜೊತೆಗೂಡಿ ಇರಬಲ್ಲವು. ಜೊತೆಗಿದ್ದೂ ದ್ವಂದ್ವಾವಸ್ಥೆಯನ್ನುಂಟುಮಾಡಲಾರವು. ಆದರೆ ಅಹಿಂಸಾತ್ಮಕ ಸೇನಾಪತಿ ಗಾಂಧೀ ದ್ವಂದ್ವಾತೀತ ಸ್ಥಿತಿಗೇರಿ ಅಂದರೆ ರಾಜಕೀಯ, ಸಾಮಾಜಿಕ, ಮತ್ತು ವಾಙ್ಮಯ ದ್ವಂದ್ವಗಳಿಂದ ಮೇಲೆದ್ದು ಅಹಂಕಾರ ನಿರಸನದ ಮಟ್ಟ ಮುಟ್ಟಿ, ಶೂನ್ಯವತ್ತಾಗಿ ವರ್ತಿಸಿ ಸತ್ಯಾಗ್ರಹದ ಯಶಸ್ಸಿಗೆ ನಿಮಿತ್ತರಾದರು.

ದೇಶದ ವಿವಿಧ ಕ್ಷೇತ್ರಗಳಲ್ಲಿ, ವಿವಿಧ ಸಮಸ್ಯೆ ಮತ್ತು ತೊಡಕಿನ ಪ್ರಶ್ನೆಗಳ ನಿರಸನಕ್ಕಾಗಿ ನಡೆಯುತ್ತಿರುವ ಹೋರಾಟಗಳಲ್ಲಿ ತೊಡಗಿರುವ ಹೋರಾಟಗಾರರು ಮತ್ತು ಯೋಧರು ಮೇಲಿನ ಐತಿಹಾಸಿಕ ಸಂಗತಿಗಳನ್ನು ಗಮನಿಸುವುದು ಒಳ್ಳೆಯದು.

***

ಮಾಹಿತಿ ಹಕ್ಕೆಂಬ ಕಾನೂನು ಒಂದು ನಟನೆ

–ಕೆ.ವಿ.ರಾಧಾಕೃಷ್ಣ ಮೆನನ್

ಸರ್ಕಾರದ ದಫ್ತರಗಳಲ್ಲಿ ಅಡಗಿರುವ ಮಾಹಿತಿಗಳನ್ನು ಅರಿಯಲು ಜನತೆಗೆ ಹಕ್ಕು ಇರಬೇಕು. ಆಗ ಜನತೆಗೆ ಆಡಳಿತದ ರೀತಿ ನೀತಿ ಗೊತ್ತಾಗುತ್ತದೆ. ಆಡಳಿತ ಪಾರದರ್ಶಕವಾಗಲು ಇದು ಸಹಾಯಕವಾದೀತು. ಈ ಉದ್ದೇಶದಿಂದ ನಮ್ಮ ದೇಶದ ಸಂಸತ್ತು ಮಾಹಿತಿಹಕ್ಕು ಮಸೂದೆಯನ್ನು ಅಂಗೀಕರಿಸಿ ಕಾನೂನು ಮಾಡಿದೆ. ಆದರೆ ನಮ್ಮ ಬಹುಪಾಲು ಕಾನೂನುಗಳಲ್ಲಿ ಏನಾದರೂ ಛಿದ್ರ, ಏನಾದರೂ ಕುಂದುಕೊರತೆ ಇದ್ದೇ ಇರುತ್ತದೆ. ಈ ಕಾನೂನೂ ಇದಕ್ಕೆ ಹೊರತಲ್ಲ. ಯಾವ ಮಾಹಿತಿ ಪಡೆಯಲು ಜನತೆಗೆ ಅವಕಾಶವಿದೆ, ಯಾವುದನ್ನು ಪಡೆಯಲಾರದು–ಇದನ್ನು ನಿಗದಿಮಾಡುವುದು ಪ್ರಭುತ್ವದ ವಿವೇಚನೆಗೆ ಬಿಟ್ಟ ವಿಷಯ.

ಕಾನೂನಿನಲ್ಲಿ ಇದೊಂದು ಛಿದ್ರ! ಕಾನೂನಿನ ಉದ್ದೇಶವನ್ನೇ ಇಲ್ಲವಾಗಿಸುವಷ್ಟು ಪ್ರಭಲವಾದ ಛಿದ್ರ! ಈ ಕುರಿತು ಜಸ್ಟೀಸ್ ಕೆ.ವಿ.ರಾಧಾಕೃಷ್ಣ ಮೆನನ್ ಎಂಬ ನ್ಯಾಯವೇತ್ತರು ಇತ್ತೀಚೆಗೆ ಭವನ್ಸ್ ಜನರಲ್ ಪತ್ರಿಕೆಯಲ್ಲಿ (ಜುಲೈ ೧೫,೨೦೦೬) ಒಂದು ಮನನೀಯ ಲೇಖನ ಬರೆದಿದ್ದಾರೆ. ಈ ಛಿದ್ರದಿಂದಾಗಿ ಹೇಗೆ ಈ ಕಾನೂನು ಒಂದು ಕಣ್ಣೋರೆಸುವ ಕ್ರಮ, ಕಣ್ಣಿಗೆ ಮಣ್ಣೇರಚುವ ಕ್ರಮ ಆಗಿದೆ, ಮತ್ತು ಪ್ರಭುತ್ವಕ್ಕೆ ತನ್ನ ಕುಕೃತ್ಯಗಳನ್ನು ಮುಚ್ಚಿಟ್ಟುಕೊಳ್ಳಲು ಒಂದು ಸಾಧನವಾಗಿದೆ, ಮುಸುಕಾಗಿದೆ ಎಂಬುದನ್ನು ಮಾನ್ಯ ನ್ಯಾಯವೇತ್ತರು ವಿಶದಪಡಿಸಿದ್ದಾರೆ.

ಕಾನೂನಿನ(ಅ)ಕಲಮಿನಲ್ಲಿ ಪ್ರಭುತ್ವಕ್ಕೆ ಈ ವಿವೇಚನಾಧಿಕಾರ ಕೊಡಲಾಗಿದೆ. ದೇಶದ ಸಾರ್ವಭೌಮಕ್ಕೆ ಏಕತೆ, ಭದ್ರತೆಗಳಿಗೆ ಭಂಗ ತರಬಹುದಾದುದು, ರಕ್ಷಣೆ, ಮುಖ್ಯ ವೈಜ್ಞಾನಿಕ ಹಾಗೂ ಆರ್ಥಿಕ ಸೂಕ್ಷ್ಮ ವಿಚಾರಗಳು, ವಿದೇಶ ಬಾಂಧವ್ಯಕ್ಕೆ ಧಕ್ಕೆ ತರುವಂಥದು ಅಪರಾಧಕ್ಕೆ ಪ್ರೇರಕವಾಗಬಹುದಾದುದು–ಇಂಥ ಮಾಹಿತಿಯನ್ನು ಜನತೆಗೆ ನಿರಾಕರಿಸುವ ಅಧಿಕಾರವನ್ನು ಪ್ರಭುತ್ವಕ್ಕೆ ಕೊಡಲಾಗಿದೆ. ಈ ವಿನಾಯಿತಿ, ಈ ಛಿದ್ರ ಸರ್ಕಸ್ ಡೇರೆ ಇದ್ದಹಾಗೆ. ಪ್ರಭುತ್ವ ಈ ವರ್ಗಕ್ಕೆ ಯಾವುದೇ ಮಾಹಿತಿಯನ್ನಾದರೂ ಸೇರಿಸಿ, ನಿಸೂರಾಗಿ ಅದನ್ನು ಜನತೆಯಿಂದ ಮುಚ್ಚಿಡಬಹುದು!

ನಮ್ಮಲ್ಲಿ ನಡೆದಿರುವ, ಈಗಲೂ ನಡೆಯುತ್ತಿರುವ ಬಹುಪಾಲು ಅನೈತಿಕ ಆಡಳಿತ ಹಗರಣಗಳೆಲ್ಲ ಒಂದಲ್ಲ ಒಂದು ರೀತಿಯಲ್ಲಿ ಈ ವರ್ಗದ ಯಾವುದಾದರೂ ಕಲಮಿಗೆ ಸೇರಿಸಬಹುದಾದಂಥವೇ. ಉದಾಹರಣೆಗೆ ಬೋಫೋರ್ಸ್, ವೋಲ್ಕರ್, ಅಣು ಒಪ್ಪಂದ ಇತ್ಯಾದಿ. ಅದೇರೀತಿ ಬಹುರಾಷ್ಟ್ರೀಯ ಕಂಪನಿಗಳ ವ್ಯವಹಾರಗಳು.

ಈ ಕಂಪನಿಗಳ ನಡವಳಿಕೆ ನಮ್ಮ ಆರ್ಥಿಕತೆಗೆ ಹಾನಿಕಾರಕ ಎಂಬುದು ಹಾದಿ ಹೋಕನಿಗೂ ಗೊತ್ತು. ಆದರೂ ಇಂಥದನ್ನು ಸರ್ಕಾರ ರಹಸ್ಯ ಮಾಹಿತಿ ಎಂದು ಹೆಸರಿಟ್ಟು, ಜನತೆಗೆ ನಿರಾಕರಿಸಬಹುದು.

(ಡಿ)ಕಲಮು ಹೇಳುತ್ತದೆ ವ್ಯವಹಾರ ವಿಶ್ವಾಸಾರ್ಹತೆ, ವ್ಯಾಪಾರ ರಹಸ್ಯಗಳು, ಬೌದ್ಧಿಕ ಆಸ್ತಿ ಹಕ್ಕು ಇತ್ಯಾದಿ ಮಾಹಿತಿಗಳನ್ನು ಜನರಿಗೆ ಕೊಡದಿರಬಹುದು. ಇಂಥ ವಿನಾಯಿತಿಗಳು ಈ ಶಾಸನದ ಘನ ಉದ್ದೇಶಕ್ಕೇ ಕೊಡಲಿ ಹಾಕುತ್ತವೆ. ದುಷ್ಟ, ಭ್ರಷ್ಟ, ಸ್ವಜನ ಪಕ್ಷಪಾತಿ ಸರ್ಕಾರ ಇಂಥ ವಿನಾಯಿತಿಗಳನ್ನು ದುರುಪಯೋಗ ಪಡಿಸಿಕೊಳ್ಳದೆ, ಕಾನೂನಿನ ಸದುದ್ದೇಶಕ್ಕೆ ಊನವಾಗದಂತೆ ಜನತೆಯ ಹಕ್ಕನ್ನು ಗೌರವಿಸುವುದು ಎಂದು ಎಂದಾದರೂ ನಂಬಲು ಸಾಧ್ಯವೆ?

ಜನತೆಗೆ, ಅದರಲ್ಲೂ ಬಡವರಿಗೆ ದೀನದಲಿತರಿಗೆ ಸೂಕ್ತ ಅವಕಾಶ, ನೆರವು, ಶಿಕ್ಷಣ, ರಕ್ಷಣೆಗಳನ್ನು ಒದಗಿಸಿ, ರಾಷ್ಟ್ರದ ಎಲ್ಲರೂ ಉತ್ತಮ ಜೀವನ ನಡೆಸುವುದು ಸಾಧ್ಯವಾಗುವಂತೆ ಮಾಡಬೇಕಾದುದು ಆಡಳಿತದ ಕರ್ತವ್ಯ. ನಮ್ಮ ಸ್ವಾತಂತ್ರ್ಯ ಹೋರಾಟಕಾಲದಲ್ಲಿ ಇಂಥ ಆಶ್ವಾಸನೆಗಳನ್ನು ತಾನೇ ಕೊಟ್ಟದ್ದು ! ಆದರೆ ಸ್ವಾತಂತ್ರ್ಯಾನಂತರ ಇದೆಲ್ಲಾ ಗಾಳಿಗೆ ಹಾರಿಹೋದದ್ದು, ಆಡಳಿತ ಅವಕಾಶವಾದಿಗಳ ಸೊತ್ತಾದದ್ದು, ಎಲ್ಲ ಬಗೆಯ ದುರಾಚಾರಗಳೂ ಮುಳ್ಳುಕಂಟಿಯಂತೆ ಹಬ್ಬಿ ಬೆಳೆದದ್ದು, 'ದರಿದ್ರ ನಾರಾಯಣ'ನ ಸ್ಥಿತಿ ಅಲ್ಲ ಗತಿ ಹಿಂದಿನಂತೆಯೆ ಉಳಿದದ್ದು, ನಮ್ಮ ಕಣ್ಣೆದುರಿಗೆ ನಡೆಯುತ್ತಿರುವ ಸಂಗತಿಗಳೇ. ರಾಜಕಾರಣಿಗಳಿಗೆ ಒಂದೇ ಗುರಿ, ಹೇಗಾದರೂ ಮಾಡಿ ಅಧಿಕಾರಕ್ಕೆ ಬರುವುದು, ಬಂದಮೇಲೆ ಅಲ್ಲಿಗೇ ಅಂಟಿಕೊಳ್ಳುವುದು, ಅಧಿಕಾರ ಸಿಗದಿದ್ದರೆ, ಅಧಿಕಾರದಲ್ಲಿರುವವರ ಕಾಲು ಎಳೆಯುವುದು ಇದೇ ಆಗಿದೆ.

ದುರ್ಗಾದಾಸ್ ಎಂಬ ಸ್ವಾತಂತ್ರ್ಯಹೋರಾಟಗಾರ ಮತ್ತು ಇತಿಹಾಸಕಾರ 'ಭಾರತ, ಕರ್ಜನ್‌ರಿಂದ ನೆಹರೂವರೆಗೆ' ಎಂಬ ಪುಸ್ತಕ ಬರೆದಿದ್ದಾರೆ. ಅದರಲ್ಲಿ ಹೇಳುತ್ತಾರೆ, "ಕಾಂಗ್ರೆಸ್ ಚುನಾವಣೆಯಲ್ಲಿ ಗೆದ್ದಿತು. ಅಲ್ಲಿಂದ ಹೊಸ ಅಧ್ಯಾಯ ಆರಂಭ, ಹೊಗಳುಭಟ್ಟರ, ಭಟ್ಟಂಗಿಗಳ ಅಧ್ಯಾಯ", ನೆಹರೂ ವಿರೋಧಿಗಳು ಎಂದು ಹಣೆಪಟ್ಟಿ ಹಚ್ಚಿ, ಎಷ್ಟೋ ಮಂದಿ ಸಜ್ಜನರಿಗೆ ದಕ್ಷರಿಗೆ ಚುನಾವಣೆಯ ಟಿಕೆಟ್ ಕೊಡಲೇ ಇಲ್ಲ. ಈ ವ್ಯಕ್ತಿಪೂಜೆಪಂಥ ಸ್ವಜನ ಪಕ್ಷಪಾತ, ಭ್ರಷ್ಟಾಚಾರ ಮತ್ತು ವಂಶಪಾರಂಪರ್ಯ ಆಡಳಿತಗಳ ದಿಡ್ಡೀ ಬಾಗಿಲನ್ನೇ ತೆರೆಯಿತು. ಭಟ್ಟಂಗಿಗಳ ಹಾಗೂ ಬಾಲಬಡುಕರ ಹಿತರಕ್ಷಣೆಗಾಗಿ ಅಪರಾಧಿಗಳಿಗೂ ರಕ್ಷಣೆ ದೊರೆಯುವಂತಾಯಿತು. ರಾಜಕೀಯ 'ಕ್ರಿಮಿನಲ್' ಆಗುತ್ತಾ ಬಂತು.

ತುಷ್ಟೀಕರಣ ತಂತ್ರ, ಓಟು ಬ್ಯಾಂಕುಗಳ ರಚನೆ, ಅಲ್ಪ ಸಂಖ್ಯಾತರ ಹೆಸರಿನಲ್ಲಿ ರಿಯಾಯಿತಿಗಳು, ವಿನಾಯಿತಿಗಳು, ಇವೆಲ್ಲಾ ಜನತೆಯಲ್ಲಿ ಒಡಕು ಮೂಡಿಸಿದವು. ಜನಸಾಮಾನ್ಯರ, ದೀನದಲಿತರ ಹಿತರಕ್ಷಣೆ ಮೂಲೆಗುಂಪಾಯಿತು. ಜನತೆಗಾಗಿ ಜನತೆಯಿಂದ ಜನತೆಯ ಪ್ರಭುತ್ವ ಹೋಯಿತು. ರಾಜಕಾರಣಿಗಾಗಿ,

ರಾಜಕಾರಣಿಯಿಂದ ರಾಜಕಾರಣಿಯ ಪ್ರಭುತ್ವ ಆಯಿತು.

ದೀನದಲಿತರ, ಆದಿವಾಸಿಗಳ, ಶ್ರೀಸಾಮಾನ್ಯರ ಪಾಡನ್ನು ಕಂಡು ಸ್ವಾಮಿ ರಂಗನಾಥಾನಂದರು ಕಣ್ಣೀರು ಮಿಡಿದರು, "ಸ್ವಾತಂತ್ರ್ಯ ಬಂದ ಮೇಲೆ ನಮ್ಮ ನಾಯಕರಲ್ಲಿ ತುಂಬಿಕೊಂಡ ಸ್ವಾರ್ಥಪರತೆ ಆಶ್ಚರ್ಯಕರ. ಇದರ ಪರಿಣಾಮ ಇಂದಿನ ದುಸ್ಥಿತಿ. ಭಾರತ ನರಕವಾಗಿ ಹೋಗಿದೆ, ನಮ್ಮ ದೇಶದ ೩೦ ಕೋಟಿ ಜನಕ್ಕೆ ಸುಭಿಕ್ಷೆ, ಉಳಿದ ೭೦ ಕೋಟಿಗೆ ಅರೆಹೊಟ್ಟೆ ಇಲ್ಲವೆ ಉಪವಾಸ."

ಸಮ್ಮಿಶ್ರ ಸರ್ಕಾರಗಳು ಪರಿಸ್ಥಿತಿಯನ್ನು ಇನ್ನೂ ರಾಡಿಗೊಳಿಸಿವೆ, ಅಧಿಕಾರ ಲೆಕ್ಕಾಚಾರದಲ್ಲೆ ರಾಜಕಾರಣಿಗಳ ಕಾಲ ಕಳೆದುಹೋಗುತ್ತದೆ. ಜನಹಿತ ಸಾಧನೆಗೆ ಸಮಯವೇ ಇಲ್ಲ. ಅಧಿಕಾರಕ್ಕಾಗಿ, ಪರಸ್ಪರ ವಿರೋಧಿಗಳೂ ಕೈಜೋಡಿಸುತ್ತಾರೆ. ಭ್ರಷ್ಟತೆಯನ್ನು ನೀಗಿ, ಬಡವರ ಏಳಿಗೆಗಾಗಿ ದುಡಿಯುವ ಯಾವುದಾದರೂ ಪಕ್ಷ ಇದೆಯೆ? ಮುಸಲೋನಿ ಹೇಳಿದರು, "ಪ್ರಜಾತಂತ್ರ ಎಂದರೆ ಅನೇಕ ರಾಜರ ಆಡಳಿತ, ಆ ಜನ ಎಷ್ಟೋಸಲ ದುಷ್ಟ ಸರ್ವಾಧಿಕಾರಿಗಿಂತ ನೀಚರು," "ರಾಜ" ಎನ್ನುವುದು ರಾಜಕಾರಣಿಯನ್ನೂ ಒಳಗೊಳ್ಳುವುದು.

ಸ್ವಾತಂತ್ರ್ಯಬಂದು ೫೯-೬೦ ವರ್ಷ ಆಗುತ್ತಿದೆ. ಭಾರತ ಇನ್ನೂ ಬಡದೇಶವೇ, ಭ್ರಷ್ಟದೇಶವೇ. ಜನಹಿತಸಾಧಕ ದೇಶ ಆಗುವುದು ಈಗ ಸಾಧ್ಯವೇ? ಉಳ್ಳವರಿಗೇ ಅನುಕೂಲಕರವಾದ ಬಹುರಾಷ್ಟ್ರೀಯ ಕಂಪೆನಿ ಬಂದಿವೆ. ಬಲ್ಲಿದ-ಬಡವರ ಭೇದ ಹೆಚ್ಚುತ್ತಿದೆ. ಈಗ ಸರ್ವಹಿತಕಾರಿ ಕಲ್ಯಾಣರಾಜ್ಯ ಹೇಗೆ ಸಾಧ್ಯವಾದೀತು? ಬಹುರಾಷ್ಟ್ರೀಯ ಕಂಪೆನಿಗಳಿಗೆ ನಮ್ಮನ್ನು ಉದ್ಧಾರ ಮಾಡುವ ಇರಾದೆ ಇದೆಯೆ? ಅವರು ಇಲ್ಲಿ ಕಲ್ಯಾಣರಾಜ್ಯ ಕಟ್ಟಿಯಾರೆ? ಅಣು ಒಪ್ಪಂದ ನಮಗೆ ವಿಶ್ವನಾಯಕ ಪಟ್ಟ ಕೊಡಲಿದೆಯೆ? -ಉತ್ತರ 'ಇಲ್ಲ' ಎನ್ನುವುದೆ? ಇನ್ನು, ಬಹುರಾಷ್ಟ್ರೀಯರು ಗುಂಡಿ ಒತ್ತಿದರೆ, ನಮ್ಮ ಆರ್ಥಿಕ ಚಕ್ರವೇ ನಿಂತುಹೋದೀತು.

ಬಡಜನರಮುಂದೆ ಒಂದು ಚೂರುರೊಟ್ಟಿಯನ್ನೂ, ಸಂವಿಧಾನದ ಮೂಲಭೂತ ಹಕ್ಕುಗಳ ಅಧ್ಯಾಯದ ಭಾಗವನ್ನೂ ಹಿಡಿಯಿರಿ, ಆತ ಯಾವುದನ್ನು ಆರಿಸಿಕೊಂಡಾನು! ರೊಟ್ಟಿಯನ್ನು ತಾನೆ! ಬಡತನದಲ್ಲೆ ಬದುಕಬೇಕಾದವನಿಗೆ ಯಾವ ಹಕ್ಕು ಏನು ಮಾಡೀತು? ಬಲ್ಲಿದನಿಗೆ ಹಕ್ಕು ಅನುಕೂಲ. ಅದನ್ನು ಬದಲಾಯಿಸಿ ಆತ ತನ್ನ ಹಿತ ಸಾಧಿಸಿಕೊಂಡಾನು. ಹಣ ಚೆಲ್ಲಿ ಹಕ್ಕು ಬದಲಾಯಿಸಿಯಾನು, ಆದರೆ ಬಡವನಿಗೆ ಹಕ್ಕಿನ ಗೊಡವೆ ಎಲ್ಲಿದೆ?

ಹೀಗಾಗಿ, ಮಾಹಿತಿ ಕಾಯಿದೆ ಹಕ್ಕು, ಸರ್ಕಾರಗಳ ಪ್ರಜಾತಂತ್ರ ವಿರೋಧಿ ಕೃತ್ಯಗಳನ್ನು ಮುಚ್ಚಲು ಒಂದು ಮುಸುಕು, ಪ್ರಜಾತಂತ್ರದ ಸೋಕು, ಅಣಕು ಅಷ್ಟೆ!

(ಸಾಭಾರ-ಭವನ್ಸ್ ಜರ್ನಲ್)
ಅನು-ನೀಲತ್ತಹಳ್ಳಿ ಕಸ್ತೂರಿ

ಇಂದಿನ ರಾಜಕಾರಣಕ್ಕೆ ಕಾಯಕಲ್ಪ ಅಗತ್ಯ

–ಎಚ್.ಎಸ್.ದೊರೆಸ್ವಾಮಿ.

ಶಾಸಕರು, ಮಂತ್ರಿಗಳು, ಅಧಿಕಾರಿಗಳು ತಾವು ಪ್ರಜೆಯ ಸೇವೆಗೆ ನೇಮಿಸಲ್ಪಟ್ಟವರು. ಆ ಸೇವೆಯನ್ನು ನಿಷ್ಪೃಹತೆಯಿಂದ ನಿರ್ವಹಿಸಬೇಕು ಎಂಬ ಭಾವನೆ ಅವರಲ್ಲಿ ಬೆಳೆಯಬೇಕು. ವೈಭವದ ಜೀವನ, ದುಂದುವೆಚ್ಚ, ದೊಡ್ಡ ದೊಡ್ಡ ಬಂಗಲೆಗಳು ಹೊಸ ಹೊಸ ಮಾಡಲ್‌ಕಾರು, ಅತಿ ಬೆಲೆಯ ಅನಾವಶ್ಯಕ ಪೀಠೋಪಕರಣಗಳು ಇವುಗಳಿಂದ ಮಂತ್ರಿಯ ಘನತೆ ಗೌರವಗಳು ಹೆಚ್ಚುತ್ತವೆ ಎಂಬ ತಪ್ಪು ಕಲ್ಪನೆ ಮಂತ್ರಿಗಳಿಗಿದೆ. ಗಾಂಧೀಜಿ ಗುಡಿಸಲಿನಲ್ಲಿದ್ದರು, ಅವರು ಜಗದ್ವಂದ್ಯರಾಗಿದ್ದರು. ಎಲ್ಲರೂ ಅವರನ್ನು ಹುಡುಕಿಕೊಂಡು ಅವರ ಗುಡಿಸಲಿಗೇ ಬರುತ್ತಿದ್ದರು. ನಮ್ಮ ಯೋಗ್ಯತೆಯ ಮೇಲೆ ನಮ್ಮನ್ನು ಜನ ಗೌರವಿಸುತ್ತಾರೆಯೇ ವಿನಃ ನಮ್ಮ ಅಟಾಟೋಪಗಳಿಗಲ್ಲ ಎಂಬುದನ್ನು ಮಂತ್ರಿಗಳು ತಿಳಿಯಬೇಕು. ತಮ್ಮ ಘನತೆಗೌರವ ಬೆಳೆಸಿಕೊಳ್ಳಬೇಕು.

ಶಾಸನಸಭೆಯಲ್ಲಿ ಶಾಸಕರು ಅಸಹ್ಯಕರವಾದ ರೀತಿಯಲ್ಲಿ ವರ್ತಿಸುತ್ತಾರೆ. ಕಾರ್ಯಕಲಾಪಗಳನ್ನು ಅಡ್ಡಿಮಾಡುತ್ತಾರೆ. ಸರ್ಕಾರ ಪಾರದರ್ಶಕವಾಗಿ ಇಲ್ಲದಿರುವುದೂ ಒಂದು ಇದಕ್ಕೆ ಕಾರಣ ಇರಬಹುದು. ವಾಕ್‌ಔಟ್, ಧರಣಿ ಅಪರೂಪವಾಗಿ ನಡೆದರೆ ಅದಕ್ಕೆ ಬೆಲೆ ಬರುತ್ತದೆ. ಮಾತೆತ್ತಿದರೆ ವಾಕ್‌ಔಟ್, ಧರಣಿ, ಕೂಗಾಟ, ಅರಚಾಟ ನಡೆಸಿ ಸಭೆಯ ಕಾರ್ಯಕಲಾಪಗಳು ನಡೆಯಲು ಅಡಚಣೆ ಮಾಡುವುದು ಶಾಸಕರಿಗೆ ಭೂಷಣವಲ್ಲ. ಅಲ್ಲದೆ ಸರ್ಕಾರದ ಬೊಕ್ಕಸಕ್ಕೆ ವೃಥಾ ಎಷ್ಟು ಖರ್ಚುಬರುತ್ತದೆ ಎಂಬುದನ್ನು ಶಾಸಕರು ಗಮನಿಸಬೇಕು.

ವಾಕ್‌ಔಟ್ ಮಾಡಿದ ದಿನ, ಸಭೆಯ ಕಾರ್ಯಕಲಾಪಗಳು ಸ್ಥಗಿತಗೊಂಡಿದ್ದದಿನ ಅದಕ್ಕೆ ಕಾರಣರಾದ ಶಾಸಕರ ದಿನಭತ್ಯವನ್ನು ತಡೆ ಹಿಡಿಯಬೇಕು ಅಂತಹ ಒಂದು ಶಾಸನ ಆಗಬೇಕು. ಇತ್ತೀಚೆಗೆ ಪ್ರತಿ ಅಧಿವೇಶನದಲ್ಲೂ ೮–೧೦ದಿನಗಳ ಕಾಲ ಸಭೆಯ ಕಾರ್ಯಕಲಾಪಗಳನ್ನು ತಡೆಹಿಡಿಯಲಾಗುತ್ತದೆ. ಈ ಪ್ರವೃತ್ತಿಯನ್ನು ತಡೆಗಟ್ಟಲು ಸೂಕ್ತ ಕ್ರಮಕೈಗೊಳ್ಳಬೇಕು.

ಈಗ ನಡೆಸಲಾಗುತ್ತಿರುವ ಚುನಾವಣೆಯ ಕ್ರಮದಲ್ಲಿ ಹಣವಿದ್ದವರು, ಕ್ರಿಮಿನಲ್‌ಗಳು, ಬಾಹುಬಲ, ಜಾತಿಬಲ, ಹಣಬಲ ಇದ್ದವರು ಮಾತ್ರ ನಮ್ಮ ಪ್ರತಿನಿಧಿಗಳಾಗಿ ಆಯ್ಕೆಯಾಗಲು ಅವಕಾಶವಾಗಿದೆ. ಪ್ರಜಾಪ್ರಭುತ್ವದಲ್ಲಿ ಬಡವಬಲ್ಲಿದ ಭೇದವಿಲ್ಲದೆ ಕೋಮು ಮತಗಳ ಭೇದವಿಲ್ಲದೆ ಎಲ್ಲರಿಗೂ ಆಯ್ಕೆಯಾಗಿ ಬರುವ ಅವಕಾಶ ಇರಬೇಕು ಪ್ರಾಮಾಣಿಕತೆ, ಯೋಗ್ಯತೆ ಸೇವಾತತ್ಪರತೆ ಇವು ಆಯ್ಕೆಯ ಮಾನದಂಡವಾಗಬೇಕು.

ಈ ದೃಷ್ಟಿಯಿಂದ ಚುನಾವಣಾ ಪದ್ಧತಿಯನ್ನೂ ಆಮೂಲಾಗ್ರವಾಗಿ ತಿದ್ದುಪಡಿ ಮಾಡುವ ಅವಶ್ಯಕತೆ ಇದೆ. ಸ್ವಾತಂತ್ರ್ಯಬಂದು ಅರವತ್ತು ವರ್ಷ ಮುಟ್ಟುತ್ತಾ ಬಂದರೂ, ಈ ದಿಸೆಯಲ್ಲಿ ಕೆಲಸನಡೆದಿಲ್ಲ. ಈಗಿರುವ ಚುನಾವಣಾ ಪದ್ಧತಿ ದುಷ್ಟರಿಗೆ, ಭ್ರಷ್ಟರಿಗೆ, ಬಲ್ಲಿದರಿಗೆ, ಜಾತಿವಾದಿಗಳಿಗೆ, ಅನುಕೂಲಕರವಾಗಿರುವುದರಿಂದ ಅವರ್‍ಯಾರೂ ಚುನಾವಣಾ ಪದ್ಧತಿಯ ಬದಲಾವಣೆಗೆ ತಲೆ ಕೆಡಿಸಿಕೊಳ್ಳುತ್ತಿಲ್ಲ. ಮತದಾರರು ಎಚ್ಚೆತ್ತುಕೊಂಡರೆ ಮಾತ್ರ ಚುನಾವಣಾ ಪದ್ಧತಿ ಆಮೂಲಾಗ್ರವಾಗಿ ಬದಲಾವಣೆ ಆಗಲು ಸಾಧ್ಯ.

ನಮ್ಮ ರಾಜ್ಯಾಂಗದಲ್ಲಿ ಪಕ್ಷಗಳ ಪ್ರಸ್ತಾಪವಿಲ್ಲ. ಆದರೂ ಪಕ್ಷಗಳು ನಾಯಿಕೊಡೆಯಂತೆ ಬೆಳೆದು ನಿಂತಿವೆ. ಪಕ್ಷರಾಜಕೀಯವನ್ನು ಬಹುಕಾಲದಿಂದ ನಡೆಸಿಕೊಂಡು ಬರುತ್ತಿರುವ ಬ್ರಿಟಿಷ್ ಪಾರ್ಲಿಮೆಂಟ್ ಕೂಡ, ಪಕ್ಷರಾಜಕೀಯವನ್ನೂ ಒಂದು ಆದರ್ಶ ಪದ್ಧತಿ ಎಂದು ಹೇಳುವುದಿಲ್ಲ. It is an inivitable evil ಎಂದು ಭಾವಿಸಿದೆ. ಹೀಗಿರುವಾಗ ನಮ್ಮ ಪಕ್ಷರಾಜಕೀಯವನ್ನೂ ನಾವು ಸ್ವಾಗತಿಸುವುದಾದರೂ ಹೇಗೆ? ಆದ್ದರಿಂದ ಈ ಪಕ್ಷರಾಜಕೀಯಕ್ಕೆ ಪರ್ಯಾಯ ವ್ಯವಸ್ಥೆ ಒಂದನ್ನು ರೂಪಿಸುವುದು ಅತ್ಯಗತ್ಯ. ಪಕ್ಷರಾಜಕೀಯಕ್ಕೆ ಪರ್ಯಾಯ ವ್ಯವಸ್ಥೆ ಎಂದರೆ ಪಕ್ಷರಹಿತ ಸರ್ಕಾರ ರಚಿಸುವುದು. ಮತದಾರರೇ ಉಮೇದುವಾರರನ್ನು ನಿಲ್ಲಿಸುವ ವ್ಯವಸ್ಥೆಯೇ ಪಕ್ಷರಹಿತ ಸರ್ಕಾರ ರಚನೆಗೆ ಇರುವ ಮಾರ್ಗ. ಈ ದೃಷ್ಟಿಯಿಂದ ಗ್ರಾಮಗಳಿಂದ ಹಿಡಿದು ಪಟ್ಟಣದವರೆಗೆ ಮತದಾರರ ಸಂಘಗಳನ್ನು ರಚಿಸಬೇಕು. ಮತದಾರರ ಸಂಘಟನೆ ಮಾಡುವವರು ಚುನಾವಣೆಗೆ ನಿಲ್ಲುವಂತಿಲ್ಲ. ಮತದಾರರು ಕಲೆತು ಉತ್ತಮ ಅಭ್ಯರ್ಥಿಗಳನ್ನು ಆಯ್ಕೆಮಾಡಿ ಚುನಾವಣೆಯ ಕಣಕ್ಕೆ ಇಳಿಸಬೇಕು, ಪ್ರತಿನಿಧಿಗಳನ್ನು ಆಯ್ಕೆಮಾಡುವವರೂ ಈ ಅಭ್ಯರ್ಥಿಗಳಿಗೆ ಮತ ನೀಡಿ ಗೆಲ್ಲಿಸುವವರೂ ಜನರೇ. ಆದ್ದರಿಂದ ಜನರ ನಿಜಪ್ರತಿನಿಧಿಗಳನ್ನೂ ಶಾಸನಸಭೆ ಪಾರ್ಲಿಮೆಂಟ್‌ಗಳಿಗೆ ಕಳುಹಿಸಲು ಸಾಧ್ಯವಾಗುತ್ತದೆ. ಮತದಾರರ ಸಂಘಕ್ಕೆ ಈ ಪ್ರತಿನಿಧಿಗಳ ಮೇಲೆ ಅಂಕುಶ ಇರುವುದರಿಂದ ಜನ ಪ್ರತಿನಿಧಿಗಳ ಸ್ವೇಚ್ಛಾಚಾರಕ್ಕೆ ಅವಕಾಶವಿರುವುದಿಲ್ಲ. ಪಂಚಾಯ್ತಿ ಚುನಾವಣೆಗಳಿಗೂ ಮತದಾರ ಸಂಘಗಳು, ಅಭ್ಯರ್ಥಿಗಳನ್ನು ನಿಲ್ಲಿಸಬೇಕು. ಈಗ ಪಂಚಾಯ್ತಿ ಅಧಿಕಾರ ಸರ್ಕಾರದವರ ಮರ್ಜಿಯನ್ನು ಅವಲಂಬಿಸುತ್ತಿದೆ. ಅದು ತಪ್ಪಿ ಪಂಚಾಯ್ತಿಗಳಿಗೆ ಹಳ್ಳಿಗಳ ಆಡಳಿತ ನಡೆಸುವ ಸಂಪೂರ್ಣ ಅಧಿಕಾರವನ್ನು ನೀಡಬೇಕು. ಗ್ರಾಮಸ್ವರಾಜ್ಯ ಸ್ಥಾಪನೆ ಅಂತಿಮ ಗುರಿಯಾಗಬೇಕು. ಗ್ರಾಮಗಳು ಸ್ವಪರಿಪೂರ್ಣ ಘಟಕಗಳಾಗಬೇಕು. ಆಹಾರ ಪೂರೈಕೆ, ಬಟ್ಟೆಯಸ್ವಾವಲಂಬನೆ, ಶಿಕ್ಷಣ, ಗ್ರಾಮನೈರ್ಮಲ್ಯ, ನೀರಾವರಿ ಯೋಜನೆಗಳು ಉದ್ಯೋಗನಿರ್ಮಾಣಕ್ಕಾಗಿ ಉದ್ಯಮಗಳ ಸ್ಥಾಪನೆ ಇವೆಲ್ಲದರ ಹೊಣೆಗಾರಿಕೆ ಪಂಚಾಯತ್ ರಾಜ್ಯ ವ್ಯವಸ್ಥೆಯ ಕೈಯಲ್ಲೇ ಇರಬೇಕು.

ಪಂಚಾಯ್ತಿಗಳ ವ್ಯಾಪ್ತಿಗೆ ಬರದ ದೇಶರಕ್ಷಣೆ, ಟಂಕಸಾಲೆ, ರೈಲು, ವಿಮಾನ

ನಿರ್ವಹಣೆ, ಅಂತರರಾಷ್ಟ್ರೀಯ ಸಂಬಂಧ ಅಂತರರಾಜ್ಯ ಸಂಬಂಧ ಹೀಗೆ ಹತ್ತು ಹಲವು ಬಾಬುಗಳನ್ನು ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ನಿರ್ವಹಿಸಬೇಕು.

ಗ್ರಾಮಗಳು ಒಂದೊಂದೂ ಸ್ವಪರಿಪೂರ್ಣ ಸ್ವಾಯತ್ತ ಘಟಕಗಳಂತೆ ಕೆಲಸ ನಿರ್ವಹಿಸಲು ಅವಕಾಶಕಲ್ಪಿಸಬೇಕು. ಮೂಲಭೂತ ಆವಶ್ಯಕತೆಗಳಿಗಾಗಿ ಸರ್ಕಾರದ ಮೇಲೆ ಅವಲಂಬಿಸುವುದು ತಪ್ಪಬೇಕು.

ಕೇಂದ್ರದಲ್ಲಿ ಪಾರ್ಲಿಮೆಂಟ್, ರಾಜ್ಯಗಳಲ್ಲಿ ಶಾಸನಸಭೆಗಳಿದ್ದಂತೆ ಗ್ರಾಮ ಪಂಚಾಯ್ತಿಗಳ ಮೇಲ್ವಿಚಾರಣೆಗೆ ಗ್ರಾಮಸಭೆಗಳು ಅಸ್ತಿತ್ವಕ್ಕೆ ಬರಬೇಕು. ಪ್ರತಿ ಗ್ರಾಮದ ಎಲ್ಲ ಮತದಾರರೂ ಗ್ರಾಮ ಸಭೆಯ ಸದಸ್ಯರು ಗ್ರಾಮಸಭೆ, ಪಂಚಾಯ್ತಿಗಳನ್ನು ತನ್ನ ಅಧೀನದಲ್ಲಿಟ್ಟುಕೊಳ್ಳಬೇಕು.

***

ಶ್ರದ್ಧಾಂಜಲಿ

ಸಂತ ವಿನೋಬಾರವರ ಸೇವೆಯಲ್ಲಿ ತಮ್ಮ ಜೀವನವನ್ನು ಸವೆಸಿದ್ದ ಮತ್ತು ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಿದ್ದ ಮಹಾದೇವಿತಾಯಿಯವರು ದಿನಾಂಕ:೬-೮-೨೦೦೬ ರಂದು ತಮ್ಮ ೧೦೧ ನೇ ವಯಸ್ಸಿನಲ್ಲಿ ತೀರಿಕೊಂಡರು. ಅವರ ಆತ್ಮಕ್ಕೆ ಜನಪದ ವಿಚಾರ ತನ್ನ ಸಂತಾಪವನ್ನು ವ್ಯಕ್ತಪಡಿಸುತ್ತದೆ.

***

ಹಿಂದೂ ಮತ್ತು ಮುಸ್ಲಿಂ ಧರ್ಮಗಳ ಮಧುರ ಸಂಬಂಧದ ಸಂಕೇತವಾಗಿದ್ದ ಡಾ॥ಎಸ್.ಕೆ.ಕರೀಂಖಾನ್‌ರವರು ದಿನಾಂಕ:೨೯ -೭-೨೦೦೬ ರಂದು ನಿಧನರಾದುದಕ್ಕಾಗಿ ಜನಪದ ವಿಚಾರವು ತನ್ನ ದುಃಖವನ್ನು ವ್ಯಕ್ತಪಡಿಸುತ್ತದೆ.

***

ಹಿಂದೂ-ಇಸ್ಲಾಂ ಮತಗಳ ಐಕ್ಯತೆಯ ಸಂಕೇತವಾಗಿದ್ದ ಮತ್ತು ಶೆಹನಾಯ್ ವಾದ್ಯದ ಮೂಲಕ ನಾದಬ್ರಹ್ಮನ ಕೃಪೆಗೆ ಪಾತ್ರರಾಗಿದ್ದ ಭಾರತರತ್ನ ಬಿಸ್ಮಿಲ್ಲಾಖಾನ್‌ರವರು ತಮ್ಮ ೯೧ನೇ ವಯಸ್ಸಿನಲ್ಲಿ ೨೧-೦೮-೦೬ರಂದು ಪಂಚಭೂತಗಳಲ್ಲಿ ಲೀನರಾದರು. ಅವರಿಗೆ ಜನಪದ ವಿಚಾರ ತನ್ನ ಗೌರವಪೂರ್ಣವಾದ ಶ್ರದ್ಧಾಂಜಲಿಯನ್ನು ಅರ್ಪಿಸುತ್ತದೆ.

***

ಆರೋಗ್ಯಕ್ಕಾಗಿ ಕೆಲವು ಸುಲಭೋಪಾಯಗಳು

–ಡಾ॥ ಜಿ.ವಿ. ಕುಲಕರ್ಣಿ

ಮಗುವಿಗೆ ಅತ್ಯಂತ ಹಿತವಾದ ಆಹಾರ ತಾಯಿಯ ಹಾಲು. ತಮ್ಮ ಕಾಯಸೌಂದರ್ಯ ಕೆಡುವುದೆಂದು ಭಾವಿಸುವ ತಾಯಂದಿರು ಮೊಲೆ ಹಾಲು ಬಿಡಿಸಿ ಮಗುವಿಗೆ ಬಾಟಲಿ ಹಾಲು ಕೊಡುತ್ತಾರೆ. ಇದರಿಂದ ತಾಯಿಗೂ ಒಳ್ಳೆಯದಲ್ಲ. ಮಗುವಿಗೂ ಒಳ್ಳೆಯದಲ್ಲ. ಸ್ತ್ರೀಯರಿಗೆ ಸ್ತನದ ಕ್ಯಾನ್ಸರ್ ಆಗಲು ಇರುವ ಹಲವಾರು ಕಾರಣಗಳಲ್ಲಿ ಮಕ್ಕಳಿಗೆ ಹಾಲು ಕುಡಿಸದೇ ಇರುವುದೂ ಒಂದು. ಬಾಟಲಿ ಹಾಲಿನ ಜಾಹಿರಾತಿನ ಮುಂದೆ ತಾಯಿಯ ಹಾಲು ಶ್ರೇಷ್ಠವೆಂಬ ಮಾತು ಅರಣ್ಯರೋದನವಾಗುತ್ತದೆ. ಇದನ್ನು ಹೇಳಲು ವಿಶ್ವ ಆರೋಗ್ಯ ಸಂಸ್ಥೆಯೇ ಮುಂದೆ ಬರಬೇಕಾಗುತ್ತದೆ. ಈ ಮಾತು ಹೇಳುವಾಗ ಮತ್ತೂರು ಕೃಷ್ಣಮೂರ್ತಿಯವರ ಆತ್ಮ ಚರಿತ್ರೆ ನೆನಪಾಗುತ್ತದೆ. ಅವರು ಬಾಲ್ಯದಲ್ಲಿ ತಾಯಿಯ ಹಾಲನ್ನು ಮೂರು ವರ್ಷ ಕುಡಿದರಂತೆ. ಇದಕ್ಕೆ ಕಾರಣ ಅವರ ಬಡತನವಾಗಿತ್ತು. ತಾಯಿಗೆ ಬೇರೆ ಖಾದ್ಯ ಕೊಡಲು ಸಾಧ್ಯವಾಗುತ್ತಿರಲಿಲ್ಲವೆಂದು ಹಾಲನ್ನೇ ಕುಡಿಸುತ್ತಿದ್ದಳು. ಮುಂದೆ ಇವರು ಭಾರತೀಯ ವಿದ್ಯಾಭವನದ ಲಂಡನ್ ಶಾಖೆಯ ಮುಖ್ಯಸ್ಥರಾಗಿದ್ದಾಗ ತಮ್ಮ ತೂಕ ಕಡಿಮೆ ಮಾಡಲು ಉಪವಾಸ ಕೈಗೊಂಡರಂತೆ. ೨–೩ದಿನ ಬರಿ ನೀರು ಸೇವಿಸಿ ಉಪವಾಸ ಮಾಡಿದರೆ ೧–೨ಕಿಲೋ ತೂಕ ನಿಶ್ಚಿತವಾಗಿ ಕಡಿಮೆಯಾಗುತ್ತದೆ. ಇವರ ತೂಕ ೫ದಿನಗಳ ಉಪವಾಸದ ನಂತರವೂ ಕಡಿಮೆಯಾಗಲಿಲ್ಲವಂತೆ. ಡಾಕ್ಟರರಿಗೆ ಇದು ಸಂಶೋಧನೆ ಮಾಡಲು ಯೋಗ್ಯ 'ಕೇಸ್' ಆಯಿತು. ಲಂಡನ್‌ನಲ್ಲಿ ಚ್ಯಾರಿಂಗ್ ಕ್ರಾಸ್ ಆಸ್ಪತ್ರೆಯಲ್ಲಿ ದಾಖಲಾದರು. ಏಳು ದಿನ ಉಪವಾಸ ಮಾಡಿದರೂ ಇವರ ತೂಕ ಕಡಿಮೆಯಾಗಲಿಲ್ಲ. ಡಾಕ್ಟರರು ಕುತೂಹಲದಿಂದ ಕೇಳಿದರು. "ನೀವು ಎಷ್ಟು ತಿಂಗಳು ತಾಯಿಯ ಹಾಲು ಕುಡಿದಿದ್ದೀರಿ"? ಎಂದು. ಮತ್ತೂರು ಜೀ ಉತ್ತರಿಸಿದರು, "ಮೂರು ವರ್ಷ" ಎಂದು. ಡಾಕ್ಟರರಿಗೆ ಉತ್ತರ ದೊರೆತಿತ್ತು. ಮಕ್ಕಳು ಹೆಚ್ಚು ಕಾಲ ತಾಯಿಯ ಹಾಲು ಸೇವಿಸಿದರೆ ಅವುಗಳ ಜೀರ್ಣಶಕ್ತಿ ವರ್ಧಿಸುತ್ತದೆ. ಶಕ್ತಿಯೂ ಹೆಚ್ಚಾಗಿರುತ್ತದೆ. ಏಳು ದಿನ ಇವರು ಉಪವಾಸವಿದ್ದರೂ ಇವರ ತೂಕ ಕಡಿಮೆಯಾಗದಿರಲು ಕಾರಣ ಇವರ ಬಾಲ್ಯದ ಪೋಷಣೆ ಎಂಬ ತೀರ್ಮಾನಕ್ಕೆ ಡಾಕ್ಟರರು ಬಂದರು. ("ಮುತ್ತೂರಜೀ") ಆತ್ಮ ಚರಿತ್ರೆ ಪು.೧೯).

ನಿಸರ್ಗದ ಕೆಲವು ನಿಯಮಗಳಿವೆ.(ಕಾಯಿದೆಗಳಿವೆ) ಅವುಗಳನ್ನು ಉಲ್ಲಂಘಿಸಿದರೆ ಪ್ರಕೃತಿ ನಮಗೆ ಶಿಕ್ಷೆ ವಿಧಿಸುತ್ತದೆ. ಅದು ರೋಗಗಳ ರೂಪದಲ್ಲಿ,

ನಿಸರ್ಗದೊಂದಿಗೆ ಸಾಮರಸ್ಯದಿಂದ ಬಾಳುವುದೇ ಒಳ್ಳೆಯ ಆರೋಗ್ಯದ ಗುಟ್ಟು. ರಸ್ತೆಯ ಅಪಘಾತ ಏಕೆ ಆಗುತ್ತದೆ? ಅವಸರ, ವೇಗವಾಗಿ ವಾಹನ ನಡೆಸುವ ಅಮಲು, ಇನ್ನೊಬ್ಬರನ್ನು ಹಿಂದೆ ಹಾಕುವ ಸ್ಪರ್ಧೆ ಅಲ್ಲವೇ? ಪ್ರತಿಯೊಂದು ಕಾಯಿಲೆಯೂ ನಾವು ಪ್ರಕೃತಿಯ ವಿರುದ್ಧ ಹೋಗಿದ್ದರ ಸಾಕ್ಷಿ ಆಗಿದೆ. ನಿಸರ್ಗ ಚಿಕಿತ್ಸೆ ಅಂದರೆ ನಮ್ಮನ್ನು ಸರಿಯಾದ ದಾರಿಗೆ ತರುವ ತರಬೇತಿ ಶಿಬಿರದಂತೆ ಕೆಲಸ ಮಾಡುತ್ತದೆ. ಆಹಾರದಲ್ಲಿ ನಿಯಮಿತತೆ, ದೇಹಕ್ಕೆ ಅವಶ್ಯಕವಾದ ಗಾಳಿ(ಓಝೋನ್) ಬೆಳಕು (ಬಿಸಿಲು), ನೀರು ಮತ್ತು ಮಣ್ಣಿನ ಸಂಪರ್ಕ ಸಾಧಿಸುವುದೇ ನಿಸರ್ಗ ಚಿಕಿತ್ಸೆ. ದೇವರ ನಾಮಸ್ಮರಣೆ 'ಅಧರಕ್ಕೆ ಕಹಿ, ಉದರಕ್ಕೆ ಸಿಹಿ' ಎಂದು ಬಸವಣ್ಣ ಹೇಳಿದ್ದರು. ನಮ್ಮ ಆಹಾರದ ವಿಷಯದಲ್ಲಿ ಹೇಳುವುದಾದರೆ ಹೆಚ್ಚಿನ 'ಜಂಕ್ ಫುಡ್' 'ಫಾಸ್ಟ್‌ಫುಡ್' ನಮ್ಮ ಅಧರಕ್ಕೆ ಸಿಹಿ (ರುಚಿಕರ) ಆದರೆ ಉದರಕ್ಕೆ (ಜಠರಕ್ಕೆ) ಕಹಿ (ಅಹಿತಕಾರಿ) ಆಗಿರುವುದಿಲ್ಲವೇ?

ಕಾಯಿಲೆ ಬಂದ ಮೇಲೆ ಅದನ್ನು ಹೊಡೆದೋಡಿಸಲು ಪರದಾಡುವುದಕ್ಕಿಂತ ಕಾಯಿಲೆ ಬರದಂತೆ ಕಾಳಜಿ ವಹಿಸುವುದು ಒಳ್ಳೆಯ ಪರ್ಯಾಯವಲ್ಲವೇ? ಪ್ರತಿಯೊಬ್ಬನಲ್ಲಿ 'ಜೀವನಶಕ್ತಿ' ಎಂಬುದು ಇದೆ. ಇದು ಯಾರಲ್ಲಿ ಅಧಿಕವಾಗಿರುತ್ತದೋ ಅವರಿಗೆ ಕಾಯಿಲೆಯಾಗುವ ಸಂಭವ ಕಡಿಮೆ. ಹಾಗಾದರೆ ನಮ್ಮಲ್ಲಿರುವ ಜೀವನ ಶಕ್ತಿಯನ್ನು ಯಾಕೆ ವೃದ್ಧಿಸಿಕೊಳ್ಳಬಾರದು? ಎಂದು ಮೋದಿಯವರು ಕೇಳುತ್ತಾರೆ. ಮತ್ತು ಸುಲಭೋಪಾಯಗಳನ್ನು ಸೂಚಿಸುತ್ತಾರೆ.

ಹಾಗಾದರೆ ಜೀವನಶಕ್ತಿ ಎಂದರೇನು? ಆಗಸದಲ್ಲಿ ಸ್ವಚ್ಛಂದವಾಗಿ ಹಾರಾಡುವ ಹಕ್ಕಿಗಳ ಹಿಂದೆ ಇರುವ ಶಕ್ತಿ ಯಾವುದು? ನೆಲದ ಮೇಲೆ ಓಡಾಡುವ ಪ್ರಾಣಿಗಳ ಹಿಂದೆ ಇರುವ ಶಕ್ತಿ ಯಾವುದು? ನೀರಿನಲ್ಲಿ ಸಂಚರಿಸುವ ಜಲಚರಗಳ ಹಿಂದೆ ಇರುವ ಶಕ್ತಿ ಯಾವುದು? ಮಕ್ಕಳು ಜಿಗಿಯುವಾಗ, ಆಟ ಆಡುವಾಗ, ಮುಖದಲ್ಲಿ ಉಕ್ಕುವ ಖುಷಿ ತೋರುವಾಗ ಅವರ ಹಿಂದೆ-ಇರುವ ಶಕ್ತಿ ಯಾವುದು? ಅದುವೇ ಜೀವನ ಶಕ್ತಿ. ವಯಸ್ಸಾದಂತೆ ಈ ನೈಸರ್ಗಿಕ ಖುಷಿ ಕಡಿಮೆಯಾಗುತ್ತದೆ. ನಾವು ಮಕ್ಕಳಂತೆ ಜೀವನ ಲೀಲೆಯಲ್ಲಿ ಒಂದಾಗಬೇಕು ಎಂದು ಮೋದಿಯವರು ಹೇಳುತ್ತಾರೆ. ನಾವು ಊಟ ಮಾಡುತ್ತೇವೆ. ಆದರೆ ಉಂಡ ಅನ್ನ ಪಚನವಾಗುವುದಿಲ್ಲ. ಆಗ ನಮ್ಮಲ್ಲಿರುವ ಜೀವನಶಕ್ತಿ ಕಡಿಮೆಯಾಗಿದೆ ಎಂದರ್ಥ. ಹಸಿವೆಯಾಗಲು ಪಚನವಾಗಲು, ಸರಿಯಾದ ನಿದ್ದೆ ಬರಲು ಕೇವಲ ದೈಹಿಕ ಕಾರಣವೊಂದೇ ಇರುವುದಿಲ್ಲ. ಮನಸ್ಸೂ ಅಷ್ಟೇ ಮುಖ್ಯವಾಗಿರುತ್ತದೆ. ಪ್ರಬಲವಾದ ಚಿಂತೆ ಕಾಡುವಾಗ ಊಟ ರುಚಿಸುವುದಿಲ್ಲ. ಉಂಡ ಅನ್ನ ಪಚನವಾಗುವುದಿಲ್ಲ. ನಿದ್ದೆಯಂತೂ ಬರುವುದಿಲ್ಲ. ಸದಾಕಾಲ ನಾವು ರೋಗದಿಂದ ಮುಕ್ತಿ ಪಡೆಯಬೇಕಾದರೆ ನಮ್ಮಲ್ಲಿಯ ಉತ್ಸಾಹ ಹಾಗೂ ಜೀವನಶಕ್ತಿಯನ್ನು ಕಾಪಾಡಿಕೊಳ್ಳಬೇಕು.

ಜೀವನಶಕ್ತಿಯನ್ನು ವರ್ಧಿಸಲು ನಾವು ಕೆಲವು ಸಾಮಾನ್ಯ ನಿಯಮಗಳನ್ನು ಪಾಲಿಸಬೇಕಾಗುವುದು.

ಮೊದಲನೆಯದಾಗಿ ನಿಮಗೆ ಸರಿಯಾಗಿ ನಿದ್ದೆ (ನಿದ್ರೆ) ಬರುತ್ತಿದೆಯೇ ನೋಡಿಕೊಳ್ಳಿ. ಜೀವನ ಶಕ್ತಿಯ ದೊಡ್ಡ ಸ್ರೋತ ನಿದ್ದೆಯಲ್ಲಿದೆ. ನವಜಾತ ಶಿಶು ೨೨-೨೩ ಗಂಟೆ ಮಲಗಿರುತ್ತದೆ. ಮಗು ಬೆಳೆದಂತೆ ನಿದ್ದೆ ಕಡಿಮೆಯಾಗುತ್ತದೆ. ಸಾಮಾನ್ಯವಾಗಿ ನಮಗೆ ಎಂಟು ತಾಸು ನಿದ್ದೆ ಬೇಕಾಗುತ್ತದೆ. ಕೆಲವರಿಗೆ ಆರು ತಾಸು ಸಾಕಾಗುತ್ತದೆ. ಮಧ್ಯಾಹ್ನ ಬಹಳ ಕೆಲಸ ಮಾಡುವವರು ಬೇಗ ಮಲಗಿ ಏಳುವ ಅಭ್ಯಾಸ ರೂಡಿಸಿಕೊಳ್ಳಬೇಕು. ರಾತ್ರಿ ತಡವಾಗಿ ಮಲಗುವವರು ಮಧ್ಯಾಹ್ನ ಸ್ವಲ್ಪ ಕಾಲ ಮಲಗಬಹುದು. ವಾಮಕುಕ್ಷಿಯ ಸುಖ ಪಡೆಯಬಹುದು. ಒಳ್ಳೆಯ ನಿದ್ದೆ ಬರಲು ಆಹಾರದೊಂದಿಗೆ ವಿಹಾರ ಹಾಗೂ ವಿಚಾರ ಕೂಡ ಮಹತ್ವದ ಪಾತ್ರ ವಹಿಸುತ್ತವೆ. ವೈದ್ಯರ ಮಲಗಿದ ರೋಗಿಯನ್ನು ಎಚ್ಚರಿಸಿ ಔಷಧಿ ಕೊಡುವುದನ್ನು ತಡೆಯುತ್ತಾರೆ. ಕಾರಣ ನಿದ್ದೆಯೇ ಒಂದು ರೀತಿಯ ಔಷಧಿಯಂತೆ ಕೆಲಸ ಮಾಡುತ್ತದೆ. ಬೇಗ ಮಲಗಿ ಬೇಗ ಏಳುವ ಅಭ್ಯಾಸ ಈ ದಿನಗಳಲ್ಲಿ ಕಡಿಮೆಯಾಗುತ್ತದೆ. ಬ್ರಾಹ್ಮೀ ಮೂಹೂರ್ತದಲ್ಲಿ ಮಾಡುವ ಅಭ್ಯಾಸ, ಧ್ಯಾನ, ಮತ್ತು ವ್ಯಾಯಾಮ ಬಹಳ ಫಲಪ್ರದವೆಂದು ನಮ್ಮ ಪೂರ್ವಜರು ನಂಬಿದ್ದರು.

ಸೂರ್ಯಕಿರಣ, ಬಿಸಿಲು ನಮಗೆ ಜೀವನಶಕ್ತಿ ನೀಡುವ ಬಹು ದೊಡ್ಡ ಸ್ರೋತವಾಗಿದೆ. ಸೂರ್ಯನ ಬೆಳಕನ್ನು ಪಡೆಯದ ಗಿಡ, ಮರ, ಬಳ್ಳಿಗಳಲ್ಲಿ ಅಷ್ಟೊಂದು ಆರೋಗ್ಯ ಕಾಂತಿ ಇರುವುದಿಲ್ಲ. ಮೈಮೇಲೆ ಕಡಿಮೆ ಬಟ್ಟೆ ಧರಿಸಿ ಸೂರ್ಯಸ್ನಾನಕ್ಕೆ ಮೈಯೊಡ್ಡಬೇಕು.

ಶುದ್ಧಗಾಳಿಯ ಅವಶ್ಯಕತೆ ನಮ್ಮ ದೇಹಕ್ಕೆ ಎಷ್ಟಿದೆ ಎಂಬುದನ್ನು ನಾವು ಒತ್ತಿ ಹೇಳುವ ಅವಶ್ಯಕತೆಇಲ್ಲ. ಆಕ್ಸಿಜನ್ ಅರ್ಥಾತ್ ಪ್ರಾಣವಾಯುವಿನಿಂದಾಗಿ ನಮ್ಮ ದೇಹದ ವ್ಯಾಪಾರ ನಡೆದಿದೆ. ಅನ್ನ, ನೀರು, ಇಲ್ಲದೆ ಕೆಲವು ದಿನ ಮನುಷ್ಯ ಬದುಕಬಲ್ಲ. ಆದರೆ ಹವೆ ಇಲ್ಲದಿದ್ದರೆ ಮನುಷ್ಯ ಬದುಕಲಾರ. ಹವೆಯೇ ನಮ್ಮ ಪ್ರಾಣ. ಉಸಿರಾಟ ಇರುವವರೆಗೆ ನಮ್ಮ ಎದೆಬಡಿತ ಇರುತ್ತದೆ. ಉಸಿರಾಟ ನಿಂತರೆ ಪ್ರಾಣ ನಮ್ಮಿಂದ ದೂರವಾಗುತ್ತದೆ. ಪ್ರಾಣವಾಯು ನಮ್ಮ ಅಶುದ್ಧ ರಕ್ತವನ್ನು ಶುದ್ಧಗೊಳಿಸುತ್ತದೆ. ದೂಷಿತ ಹಾಗೂ ಪ್ರದೂಷಿತ ಹವೆಯಿಂದ ರೋಗಗಳು ಹಬ್ಬುತ್ತವೆ. ನಾವು ಯೋಗಾಸನ ಮಾಡುವಾಗ ಗಾಳಿ ಬೆಳಕು ನಮ್ಮ ಕೋಣೆಯಲ್ಲಿ ಚೆನ್ನಾಗಿರುವುದನ್ನು ನೋಡಿಕೊಳ್ಳಬೇಕು. ಸಂಜೆ ವಾಯುವಿಹಾರಕ್ಕಿಂತ ಬೆಳಗಿನ ಜಾವದಲ್ಲಿ ವಾಯುವಿಹಾರಕ್ಕೆ ಹೋಗುವುದು ಹೆಚ್ಚು ಹಿತಕರ. ವಾಹನಗಳು ವಾತಾವರಣವನ್ನು ಕುಲಷಿತಗೊಳಿಸುವ ಪೂರ್ವದಲ್ಲೇ ವಾಯುವಿಹಾರಕ್ಕೆ ಹೋಗುವುದು ಒಳ್ಳೆಯದು. ಶುದ್ಧ ನೀರಿಗಿಂತ ಒಳ್ಳೆಯ ಔಷಧಿ ಇಲ್ಲ. ವಾಯು ವಿಹಾರಕ್ಕಿಂತ ಒಳ್ಳೆಯ ವ್ಯಾಯಾಮ ಇನ್ನೊಂದಿಲ್ಲ. ಪ್ರಾಣಾಯಾಮ ಬಹಳ

ಮುಖ್ಯವಾಗಿದೆ. ದೀರ್ಘಶ್ವಾಸ ತೆಗೆದುಕೊಳ್ಳುವುದನ್ನು ರೂಢಿಸಿಕೊಳ್ಳಬೇಕು. ವಾಯುವಿಹಾರ ಎಲ್ಲ ವಯಸ್ಸಿನವರಿಗೂ ಲಾಭಪ್ರದವಾಗಿದೆ. ಸೂರ್ಯೋದಯಕ್ಕಿಂತ ಮೊದಲು ಎದ್ದು, ಗಿಡಮರಗಳು ಹೆಚ್ಚಾಗಿರುವ ದಾರಿಯನ್ನು ಆರಿಸಿ, ವಾಯು ವಿಹಾರಕ್ಕೆ ಹೋದರೆ ಶುದ್ಧ ಪ್ರಾಣವಾಯು(ಓಝೋನ್) ಸೇವಿಸಬಹುದು.

ಶುದ್ಧ ನೀರು ನಮ್ಮ ಜೀವನಶಕ್ತಿಗೆ ಬಹಳ ಅವಶ್ಯ. ಸಿಕ್ಕಸಿಕ್ಕಲ್ಲಿ ಯಾವುದೇ ನೀರು ಕುಡಿದರೆ ಅದು ರೋಗಗಳಿಗೆ ಆಮಂತ್ರಣ ನೀಡಿದಂತೆ. ಕುದಿಸಿದ ನೀರು ಕುಡಿಯಲು ಶ್ರೇಷ್ಠವಾಗಿರುತ್ತದೆ. ನೀವು ಕೆಲಸಕ್ಕೆ ಹೋಗುವಾಗ ಮನೆಯ ಶುದ್ಧ ಆಹಾರದ ಜೊತೆಗೆ ನೀರನ್ನು ಒಯ್ಯುವ ಅಭ್ಯಾಸ ರೂಢಿಸಿಕೊಂಡರೆ ಬಹಳ ಒಳ್ಳೆಯದು. ಕೆಲವರು ದಿನಕ್ಕೆ ಹಲವಾರು ಕಪ್ ಚಹ ಕುಡಿಯುತ್ತಾರೆ. ಅವರು ನೀರು ಕುಡಿಯುವುದಿಲ್ಲ. ಚಹ ನೀರಿಗೆ ಪರ್ಯಾಯವಲ್ಲ. ದಿನಕ್ಕೆ ಕನಿಷ್ಠ ಎಂಟು ಗ್ಲಾಸು ನೀರು ಕುಡಿಯಬೇಕು. ಇದಲ್ಲದೆ ಬೆಳಿಗ್ಗೆ ಎದ್ದೊಡನೆ ಒಂದು (ತಂಬಿಗೆ) ಲೀಟರ್ ನೀರು ಕುಡಿಯುವ (ಉಷಃಪಾನ) ಅಭ್ಯಾಸ ಇಟ್ಟುಕೊಳ್ಳಬೇಕು. ನೀರು ಇಟ್ಟ ಪಾತ್ರೆ ತಾಮ್ರದ್ದಾಗಿದ್ದರೆ ಹೆಚ್ಚು ಒಳ್ಳೆಯದು. ಸುವರ್ಣಕ್ಕೆ ಸುಗಂಧ ಬೆರಸಿದಂತೆ. ರಾತ್ರಿ ಮಲಗುವಾಗ ಕೂಡ ನೀರು ಕುಡಿಯಬೇಕು. ಊಟಕ್ಕೆ ಮೊದಲು, ಊಟದ ನಂತರ ನೀರು ಕುಡಿಯುವಾಗ ಅಂತರ ಕಾಪಾಡಬೇಕು. ಸ್ನಾನ ಅಭ್ಯಾಸ ಒಳ್ಳೆಯದು. ವಿಶೇಷವಾಗಿ ತಣ್ಣೀರಿನ ಸ್ನಾನದ ಅಭ್ಯಾಸ ಮಾಡಿಕೊಳ್ಳಬೇಕು. ಬಿಸಿನಿರಿನಿಂದ ದೇಹ ಸುಸ್ತಾಗುತ್ತದೆ. ತಣ್ಣೀರಿನಿಂದ ರಕ್ತ ಪ್ರವಾಹ ಚುರುಕುಗೊಳ್ಳುತ್ತದೆ. ಸ್ನಾನವೆಂದರೆ 'ಬೋರ್ಗಲ್ಲ ಮೇಲೆ ನೀರ್ಗರೆದಂತೆ' ಇರಬಾರದು. ಮೈಯನ್ನು ಚೆನ್ನಾಗಿ ಉಜ್ಜಬೇಕು. ಒದ್ದೆ ಬಟ್ಟೆ ಟವೆಲ್ ನಿಂದ ತ್ವಚೆಯನ್ನು ಚೆನ್ನಾಗಿ ತಿಕ್ಕಬೇಕು. ಅದರಿಂದ ರೋಮಕೂಪಗಳು ತೆರೆಯುತ್ತವೆ. ಮೈಕಾಂತಿ ವರ್ಧಿಸುತ್ತದೆ. ಚರ್ಮದಲ್ಲಿ ಸಜೀವತೆ, ಲವಲವಿಕೆ ಬರುತ್ತದೆ.*

ಸನ್ಮಾನ್ಯರಿಂದ

ನಿಮ್ಮ ಪತ್ರಿಕೆಯ ಚಂದಾದಾರರಾಗಿ ಮುಂದುವರಿಯುವ ಅಪೇಕ್ಷೆಯಿದೆ. ಹಣ ಕಳುಹಿಸುವೆ. ಪತ್ರಿಕೆ ಚೆನ್ನಾಗಿದೆ.

–ವೀಣಾ ಬನ್ನಂಜೆ. ಜಮಖಂಡಿ

"ಜನಪದವಿಚಾರ" ಪತ್ರಿಕೆಯನ್ನು ಶ್ರೀ ಕೆ.ಎಂ.ಉಡುಪರವರಿಂದ ಪಡೆದು ಗಾಂಧೀ ವಿಚಾರಗಳನ್ನು ಓದಿದೆ. ಆ ಪತ್ರಿಕೆಯನ್ನು ನಾನು ಪ್ರತಿ ತಿಂಗಳು ಓದಬೇಕೆಂಬ ಇಚ್ಛೆಯಾದ್ದರಿಂದ ವಾರ್ಷಿಕ ಚಂದಾ ನೂರು ರೂಪಾಯಿಯನ್ನು ಕಳುಹಿಸಿರುತ್ತೇನೆ.

–ಆರೂರು ಮಂಜುನಾಥರಾವ್, ಉಡುಪಿ.

ಸಂಪ್ರದಾಯ ಮುರಿದ ತಲಾಲ ಗ್ರಾಮದ ಕನ್ಯೆಯರು

-ಕೆ.ಆರ್.ಮೋಹನ್

ಗುಜರಾತ್ ಪ್ರಾಂತದ ಒಂದು ಸಣ್ಣ ಹಳ್ಳಿ ತಲಾಲ. ಅಲ್ಲಿದ್ದ ಒಬ್ಬ ವ್ಯಾಪಾರಿಗೆ ಗಂಡುಸಂತಾನವಿಲ್ಲ, ಐದು ಜನ ಹೆಣ್ಣು ಮಕ್ಕಳು. ಆ ವ್ಯಾಪಾರಿ ಇತ್ತೀಚೆಗೆ ತೀರಿಕೊಂಡ. ನಾಲ್ಕುಜನ ಹೆಣ್ಣು ಮಕ್ಕಳು ಶವವಾಹಕರಾದರು. ದೊಡ್ಡಮಗಳು ಚಿತೆಗೆ ಅಗ್ನಿಸ್ಪರ್ಶ ಮಾಡಿದಳು. ಹೀಗೆ ವ್ಯಾಪಾರಿಯ ಶವಸಂಸ್ಕಾರವಾಯಿತು. ದೊಡ್ಡ ನಗರ ಅಥವಾ ಪಟ್ಟಣಗಳಲ್ಲಿ ಇಂತಹ ಘಟನೆ ನಡೆದಿರಬಹುದು. ಆದರೆ ಹಿಂದುಳಿದ ಕುಗ್ರಾಮವೊಂದರಲ್ಲಿ ಇದು ನಡೆದದ್ದು ಬಹಳ ಮಹತ್ವದ್ದಾಗಿದೆ.

ಹಿಂದೂ ಸಮಾಜದಲ್ಲಿ ತಂದೆ ಅಥವಾ ತಾಯಿ ಸತ್ತಾಗ ಅಣ್ಣತಮ್ಮಂದಿರ ಜೊತೆ ಅಕ್ಕತಂಗಿಯರೂ ದುಃಖದಲ್ಲಿ ಭಾಗಿಯಾಗುತ್ತಾರೆ. ಆದರೆ ಹೆಣ್ಣುಮಕ್ಕಳಿಗೆ ಅಂತ್ಯೇಷ್ಟಿ (ಉತ್ತರ ಕ್ರಿಯೆ, ಅಪದಕರ್ಮಗಳು) ಯಲ್ಲಿ ಭಾಗಿಯಾಗುವ ಅಧಿಕಾರವಿಲ್ಲ. ಭಾವುಕ ಹೆಣ್ಣುಮಕ್ಕಳಿಗೆ ಈ ತರಹದ ತಾರತಮ್ಯದಿಂದ ನೋವಾದರೆ ಆಶ್ಚರ್ಯವಿಲ್ಲ. ಮಗಳನ್ನು ಋಣವೆಂದು ಭಾವಿಸಿದ ಸಮಾಜ ಆಕೆಗೆ ಅಂತ್ಯೇಷ್ಟಿಯಲ್ಲಿ ಭಾಗವಹಿಸಲು ಅವಕಾಶ ಕೊಟ್ಟಿಲ್ಲ. ವಿವಾಹದಲ್ಲಿ ಕನ್ಯಾದಾನದ ಮೂಲಕ ಈ ಋಣಭಾರ ತೀರುತ್ತದೆ. ಆದ್ದರಿಂದ ಆದಷ್ಟು ಬೇಗ ಅವಳ ಮದುವೆಯನ್ನು ಮಾಡಿದರೆ ಒಳ್ಳೆಯದು ಎಂಬ ದೃಢವಾದ ನಂಬಿಕೆ ಇದೆ. ಅಂತ್ಯೇಷ್ಟಿಯಲ್ಲಿ ಮಗಳು ಒಂದು ವೇಳೆ ಭಾಗಿಯಾದರೆ ಪುನಃ ಋಣ ಉಂಟಾಗಿ ಸತ್ತವರ ಮೋಕ್ಷಕ್ಕೆ ಅಡ್ಡಿಯಾಗುತ್ತದೆಂಬ ನಂಬಿಕೆ ಕೂಡ ಇದೆ. ಆದರೆ ಮಗ ಅಂತ್ಯೇಷ್ಟಿ ಕರ್ಮಗಳನ್ನು ಮಾಡುವುದು ಕರ್ತವ್ಯ ಮತ್ತು ಇದರಿಂದ ಅವನು ತನ್ನ ಮಾತೃ-ಪಿತೃ ಋಣವನ್ನು ಸಂದಾಯ ಮಾಡಿದಂತೆ ಆಗುತ್ತದೆ ಎಂದು ಶಾಸ್ತ್ರವನ್ನು ಉದ್ಧರಿಸುತ್ತಾರೆ. ವೇ.ಬ್ರಂ.ಪ್ರೋ. ಶ್ರೀಕಂಠಸ್ವಾಮಿಯವರು(೧೮೭೧-೧೯೩೦ಳಳ) ತಮ್ಮ 'ಶ್ರಾದ್ಧ' ಹಾಗೂ 'ಅಂತ್ಯೇಷ್ಟಿ' ಪುಸ್ತಕಗಳಲ್ಲಿ ಶಾಸ್ತ್ರ ರೀತ್ಯಾ ಹೆಣ್ಣು ಮಕ್ಕಳಿಗೆ ಹಾಗೂ ಹೆಂಡತಿಗೆ ಕೂಡ ಅಂತ್ಯೇಷ್ಟಿಯ ಕರ್ಮಗಳಲ್ಲಿ ಭಾಗವಹಿಸುವ ಅಧಿಕಾರವಿದೆಯೆಂದು ಅಭಿಪ್ರಾಯ ಪಡುತ್ತಾರೆ. ಹೆಚ್ಚಿನ ಮಾಹಿತಿಗಾಗೆ ಈ ಪುಸ್ತಕಗಳನ್ನು ಅವಲೋಕಿಸಬಹುದು.

ಸತ್ತನಂತರ ಮೃತನಿಗೆ ಏನಾಗುತ್ತದೆ ಎಂದು ಗೊತ್ತಿಲ್ಲ. ಅಂತ್ಯೇಷ್ಟಿಯನ್ನು ಸಾಂಗವಾಗಿ ಮಾಡಿದರೂ, ಮೃತನಿಗೆ ಮೋಕ್ಷ ಸಿಗುತ್ತದೆ ಎಂಬುದು ಖಾತರಿ ಇಲ್ಲ. ಬಹುಶಃ ತಂದೆ ತಾಯಂದಿರು ತಮ್ಮ ಗಂಡು-ಹೆಣ್ಣುಮಕ್ಕಳಲ್ಲಿ ತಾರತಮ್ಯ ಮಾಡದೆ ಅವರನ್ನು ಸಮಾನ ದೃಷ್ಟಿಯಿಂದ ನೋಡಿಕೊಂಡರೆ, ಮುಕ್ತಿ ಸಿಗಬಹುದೇನೋ!.

ತಲಾಲ ಗ್ರಾಮದಲ್ಲಿ ನಡೆದ ಈ ವಿಶಿಷ್ಟ ಶವಸಂಸ್ಕಾರ ನಿಜವಾಗಿ ಶ್ಲಾಘನೀಯ. ಹಿಂದುಳಿದಗ್ರಾಮದಲ್ಲಯೂ ಸಾಮಾಜಿಕ ಪರಿವರ್ತನೆ ಹೇಗೆ ಆಗುತ್ತದೆ ಎಂಬುದಕ್ಕೆ ಈ ಚಿಕ್ಕ ಘಟನೆ ನಿದರ್ಶನ.

***

ವಿನೋಬಾ ಹೇಳಿದ ಕೆಲ ದೃಷ್ಟಾಂತ ಕಥೆಗಳು

[ಸೆಪ್ಟೆಂಬರ್ ೧೧, ವಿನೋಬಾರವರ ಜನ್ಮದಿನದ ಸಂದರ್ಭದಲ್ಲಿ ಈ ಲೇಖನ ಪ್ರಕಟ. –ಸಂ]

ಮೋಹಗ್ರಸ್ತ ನ್ಯಾಯಾಧೀಶ

ಒಬ್ಬ ನ್ಯಾಯಾಧೀಶ ಇದ್ದ. ಆತ ನೂರಾರು ಅಪರಾಧಿಗಳಿಗೆ ಮರಣ ದಂಡನೆ ವಿಧಿಸಿದ್ದ. ಒಮ್ಮೆ ಅವನ ಮಗನೇ ಕೊಲೆಯನ್ನು ಮಾಡಿದ. ಆ ಕೊಲೆಗಡುಕ ಮಗನನ್ನು ಹಿಡಿದು ನ್ಯಾಯಾಧೀಶನ ಮುಂದೆ ತಂದು ನಿಲ್ಲಿಸಿದರು.

ಶಿಕ್ಷೆ ವಿಧಿಸಲು ನ್ಯಾಯಾಧೀಶನು ಹಿಂಜರಿದ. ಮಗನ ಮೇಲಿನ ಮೋಹದಿಂದ ಹಾಗೆ ಮಾಡಿದ. ಆಸಕ್ತಿ ಜನ್ಯ ಮೋಹ ಅವನ ಕರ್ತವ್ಯನಿಷ್ಠೆಯನ್ನು ನುಂಗಿತು. ಶಿಕ್ಷೆ ಕೊಡುವ ಪ್ರಸಂಗ ಬಂದೊದಗಿದಾಗ ಬುದ್ಧಿವಾದ ಹೇಳತೊಡಗಿದ.

"ಮರಣ ಶಿಕ್ಷೆ ಅಮಾನುಷವಾದುದು. ಇಂಥ ಶಿಕ್ಷೆಕೊಡುವುದು ಮನುಷ್ಯನಿಗೆ ಭೂಷಣವಲ್ಲ. ಅಪರಾಧಿ ಇಂದಲ್ಲ ನಾಳೆ ಉತ್ತಮನಾದಾನೆಂಬ ಆಸೆಯನ್ನು ಚಿವುಟಿ ಹಾಕುತ್ತದೆ. ಭಾವನಾವಶವಾಗಿ ಉದ್ರೇಕದಲ್ಲಿ ಕೊಲೆ ಮಾಡಿದ. ಆದರೆ ಅವನ ಕಣ್ಣೊಳಗಿನ ಕೆಂಪು ಇಳಿದ ಮೇಲೆ ಅವನನ್ನು ಗಲ್ಲಿಗೆ ನೇತು ಹಾಕಿ ಕೊಲ್ಲುವುದು ಮಾನವತ್ವಕ್ಕೆ ಕಳಂಕ" ಎಂದು ಮುಂತಾಗಿ ನ್ಯಾಯಾಧೀಶ ಹೇಳತೊಡಗಿದ.

ಮಗ ಇದಿರಿಗೆ ಬಾರದಿದ್ದರೆ ಆ ನ್ಯಾಯಾಧೀಶ ಸಾಯುವ ತನಕ ಮರಣ ಶಿಕ್ಷೆಯನ್ನು ಸಂತೋಷವಾಗಿ ಕೊಡುತ್ತಲೇ ಇರುತ್ತಿದ್ದ. ಈಗ ಮಗನ ಮೇಲಿನ ಮೋಹ ಹಾಗೆ ಮಾಡಿಸಿತು. ಈ ಬುದ್ಧಿವಾದ ಒಳಗಿನಿಂಬ ಬಂದುದಲ್ಲ; ಆಸಕ್ತಿಯಿಂದ ಬಂದುದು.

ಆತ್ಮ ಪರೀಕ್ಷಣೆ

ತುಕಾರಾಮ ಮಹಾರಾಜರು ತಮ್ಮ ಬಳಿಯಲ್ಲಿದ್ದ ಕಾಗದ ಪತ್ರವನ್ನೆಲ್ಲ ನದಿಯಲ್ಲಿ ತೇಲಿಸಿ, ಕೂಲಿ ಮಾಡಿ ಜೀವನ ನಡೆಸುತ್ತಿದ್ದರು. ಅವರದು ಹರಕು ಮುರಕು ಗುಡಿಸಲು, ಅದರಲ್ಲಿ ಮೂರು ನಾಲ್ಕು ಮಣ್ಣಿನ ಪಾತ್ರೆಗಳಿದ್ದವು. ಇದಿಷ್ಟೇ ಅವರ ಸಂಪತ್ತು. ಅವರ ಮಾವ ಅವರಿಗೆ ಒಂದು ಹಿಂಡುವ ಎಮ್ಮೆ ಕೊಟ್ಟಿದ್ದ. ಅದರ ಹಾಲನ್ನು ಮೊದಲು ಕರುವಿಗೆ ಹೊಟ್ಟೆ ತುಂಬ ಕುಡಿಸಿ ಹೆಚ್ಚಿಗೆ ಉಳಿದದನ್ನು ಮನೆಯವರು ಉಪಯೋಗಿಸುತ್ತಿದ್ದರು.

ಒಂದು ರಾತ್ರಿ ತುಕಾರಾಮರು ವಾಡಿಕೆಯಂತೆ ಮಂದಿರದಲ್ಲಿ ಕೀರ್ತನೆ ಮಾಡುತ್ತಿದ್ದರು. ಅದೇ ಹೊತ್ತು ಸಾಧಿಸಿ ಕಳ್ಳನೊಬ್ಬ ಅವರ ಮನೆ ಹೊಕ್ಕ. ಆ ಎಮ್ಮೆಯನ್ನು ಕರೆದೊಯ್ದು. ಊರು ದಾಟಿ ಎಷ್ಟೋ ದೂರ ಹೋದ. ಆದರೆ ಒಮ್ಮಿಂದೊಮ್ಮೆ ಅವನ ಹೃದಯದಲ್ಲಿ ದೇವರ ವಿಕರಾಳ ರೂಪ ಕಾಣಿಸಹತ್ತಿತು. ಮೈ ತುಂಬಾ ಬೆವರಿತು. ಕಳ್ಳನು ಗಾಬರಿಗೊಂಡು ಪ್ರಾರ್ಥಿಸಿದ. ಕ್ಷಮೆಕೇಳ ಹತ್ತಿದ. ಏನು ಮಾಡಿದರು ಸಮಾಧಾನವಾಗಲಿಲ್ಲ.

ಕೊನೆಗೆ ಕಳ್ಳನು ಎಮ್ಮೆಯನ್ನು ಹಿಂತುರುಗಿ ಕೊಡಲು ನಿರ್ಧರಿಸಿದ, ಆಗಲೇ ಅವನಿಗೆ ನೆಮ್ಮದಿ ಆಯಿತು. ಅವನು ಎಮ್ಮೆಯನ್ನು ಮೊದಲಿದ್ದ ಸ್ಥಳದಲ್ಲಿ ಕಟ್ಟಿ ಹಾಕಿ ಓಡಹತ್ತಿದ. ಆದರೆ ಅಂತರ್ಯಾಮಿಯಾಗಿದ್ದ ದೇವರು ಅವನನ್ನು ತಿರುಗಿ ಹಿಡಿದು, "ನಿನಗೆ ಪಶ್ಚಾತ್ತಾಪವಾದರೆ ಸಾಲದು. ನಿನ್ನ ತಪ್ಪು ಜಾಹಿರುಪಡಿಸಬೇಕು. ನೀನು ಹೋಗಿ ತುಕಾರಾಮರ ಹತ್ತಿರ ಕ್ಷಮೆ ಬೇಡಬೇಕು" ಎಂದು ಹೇಳಿದ.

ನಿರುಪಾಯನಾಗಿ ಕಳ್ಳನು ಅಂಜುತ್ತ ಮಂದಿರಕ್ಕೆ ಹೋದ. ಅಲ್ಲಿ ತುಕಾರಾಮರು ಕೀರ್ತನೆಯಲ್ಲಿ ಮೈಮರೆತಿದ್ದರು. ಕೀರ್ತನೆ ಮುಗುಯುವವರೆಗೂ ಆ ಕಳ್ಳ ಅಲ್ಲಿಯೇ ಕುಳಿತ. ಕೊನೆಗೆ ಎಲ್ಲ ಸಮಾಚಾರ ಇದ್ದದ್ದಿದ್ದಂತೆ ಅವರಿಗೆ ತಿಳಿಸಿದ.

"ನಿನಗೆ ಅವಶ್ಯಕತೆ ಇದ್ದರೆ ನೀನು ನನ್ನ ಎಮ್ಮೆಯನ್ನು ಒಯ್ಯಲು ನನ್ನದೇನೂ ಅಡ್ಡಿಯಿಲ್ಲ" ಎಂದು ತುಕಾರಾಮರು ಅವನಿಗೆ ಪರಿಪರಿಯಿಂದ ಆಶ್ವಾಸನೆ ಕೊಟ್ಟು ಹೇಳಿದರು. ಆದರೆ ಕೊನೆಗೂ ಅದಕ್ಕೆ ಕಳ್ಳನು ಸಮ್ಮತಿಸಲಿಲ್ಲ.

ಅಲ್ಲಿಂದ ತುಕಾರಾಮರು ಮನೆಗೆ ಬಂದರು, "ನನ್ನ ಮನೆಗೇಕೆ ಕಳ್ಳನು ಬಂದ? ಹಿಂದಿನಿಂದ ಅವನಿಗೆ ಪಶ್ಚಾತ್ತಾಪವಾಯಿತೇನೋ ನಿಜ. ಆದರೆ ನನ್ನ ಮನೆಯಲ್ಲಿ ಕಳವು ಮಾಡಬೇಕೆಂಬ ಪ್ರೇರಣೆ ಅವನಲ್ಲಿ ಅದೇಕೆ ಹುಟ್ಟಿತು? ಜಾತಿ-ಜಾತಿಗೆ ನೆಂಟು ಎಂಬಂತೆ ನಾನು ಕಳ್ಳನಾಗಿರದಿದ್ದರೆ ನನ್ನ ಮನೆಗೇಕೆ ಕಳ್ಳ ಬರುತ್ತಿದ್ದ?" ಹೀಗೆಂದು ಅವರು ಪರಿಪರಿಯಾಗಿ ವಿಚಾರ ಮಾಡಿದರು. ಆತ್ಮಮಂಥನ ನಡೆಸಿದರು. ಮರುದಿನದಿಂದ ಆ ಎಮ್ಮೆಯ ಹಾಲನ್ನು ಮನೆಯಲ್ಲಿ ಉಪಯೋಗಿಸುವುದು ಬಿಟ್ಟು ಊರಿನ ಬಡಮಕ್ಕಳಿಗೆ ಹಂಚತೊಡಗಿದರು.

ಎರಡಕ್ಷರದ ಸಾರ್ಥಕತೆ

ವಾಲ್ಮೀಕಿ ಶತಕೋಟಿ ರಾಮಾಯಣವನ್ನು ಬರೆದರು. ಅದನ್ನು ಲೂಟಿ ಮಾಡಲು ದೇವತೆಗಳು, ರಾಕ್ಷಸರು, ಮನುಷ್ಯರು ಜಗಳವಾಡತೊಡಗಿದರು. ಜಗಳ ನಿಲ್ಲಲಿಲ್ಲ. ಶಂಕರನನ್ನು ಪಂಚಾಯಿತಿ ಮಾಡಲು ಕೇಳಿದರು. ಶಂಕರ ಮೂವರಿಗೂ ಮೂವತ್ತು ಮೂರುಕೋಟಿ ಶ್ಲೋಕಗಳಂತೆ ಹಂಚಿದ. ಒಂದು ಕೋಟಿ ಉಳಿಯಿತು.

ಮತ್ತೆ ಮೂವತ್ತು ಮೂರು ಲಕ್ಷ ಶ್ಲೋಕಗಳನ್ನು ಹಂಚಿದ. ಒಂದು ಲಕ್ಷ ಅಲ್ಲಿಗೂ ಉಳಿಯಿತು. ಮತ್ತೆ ಮೂವತ್ತು ಮೂರು ಸಾವಿರ ಶ್ಲೋಕಗಳನ್ನು ಹಂಚಿದ ಒಂದು ಸಾವಿರ ಅಲ್ಲಿಗೂ ಉಳಿಯಿತು. ಹೀಗೆ ಹಂಚುತ್ತ ಹಂಚುತ್ತ ಕಡೆಗೆ ಒಂದು ಶ್ಲೋಕ ಉಳಿಯಿತು. ರಾಮಾಯಣದ ಶ್ಲೋಕ ಅನುಷ್ಟಪ್ ಛಂದಸ್ಸಿನದು ಅನುಷ್ಟಪ್ ಛಂದಸ್ಸಿನಲ್ಲಿ ಮೂವತ್ತೆರಡು ಅಕ್ಷರಗಳಿವೆ. ಅದರಲ್ಲಿ ಹತ್ತು ಹತ್ತು ಅಕ್ಷರ ಹಂಚಿದ. ಇನ್ನೂ ಎರಡಕ್ಷರ ಉಳಿಯಿತು. ಅವು ಯಾವಕ್ಷರ? ರಾ–ಮ. ಹಂಚಿದ ಕೂಲಿ ಎಂದು ಅದನ್ನು ತಾನೇ ಇಟ್ಟುಕೊಂಡ. ತನ್ನ ಸಾಕ್ಷರತೆಯನ್ನು ಶಂಕರ ಎರಡೇ ಅಕ್ಷರದಲ್ಲಿ ಮುಕ್ತಾಯ ಮಾಡಿದ.

ದೇವತೆ, ರಾಕ್ಷಸ, ಮನುಷ್ಯ ಯಾರೂ ಅವನ ಜ್ಞಾನಕ್ಕೆ ಸಮನಾಗಲಿಲ್ಲ. ಶರಣರು ಸಾಹಿತ್ಯದ ಸಾರಸರ್ವಸ್ವವನ್ನು ರಾಮನಾಮದಲ್ಲಿ ಸಂಗ್ರಹಿಸಿಟ್ಟಿದ್ದಾರೆ. ಆದರೆ ಅಭಾಗ್ಯ ಪಾಮರ ಮನುಷ್ಯನಿಗೆ ಇದು ಹೊಳೆಯದು.

ಬಹುಮತದ ರಾಜ್ಯ

ಒಬ್ಬ ಕುರುಡಿಗೆ ನಾಲ್ವರು ಮಕ್ಕಳಿದ್ದರು. ಅವರೆಲ್ಲರೂ ಕುರುಡರಾಗಿದ್ದರು. ಅನಂತರ ಅವಳಿಗೊಬ್ಬ ಐದನೇ ಮಗ ಹುಟ್ಟಿದ. ಆದರೆ ಅವನಿಗೆ ಕಣ್ಣು ಸರಿಯಾಗಿ ಕಾಣಿಸುತ್ತಿತ್ತು. "ಇದು ನನಗೆ ಕಾಣಿಸುತ್ತದೆ, ಅದು ನನಗೆ ಕಾಣಿಸುತ್ತದೆ" ಎಂದು ಹೇಳುತ್ತಿದ್ದ. ತಾಯಿಗಾಗಲಿ, ಆ ಹಿರಿಯ ಮಕ್ಕಳಿಗಾಗಲಿ ಆ ಮಾತುಗಳ ಅರ್ಥವೇ ಆಗುತ್ತಿರಲಿಲ್ಲ. ಹೀಗಾಗಿ ಆ ಕೊನೆಯ ಮಗುವಿಗೆ ಏನೊ ವಿಚಿತ್ರ ರೋಗ ಆಗಿರಬಹುದೆಂದು ಅವರಿಗೆ ಕಲ್ಪನೆ ಉಂಟಾಯಿತು. ಕೊನೆಗೆ ಅವರು ಆ ಮಗುವನ್ನು ಡಾಕ್ಟರರ ಬಳಿಗೆ ಕರೆದೊಯ್ದರು ಮತ್ತು ಹೇಳಿದರು, "ನಮ್ಮ ಈ ಹುಡುಗನಿಗೆ ಏನೋ ವಿಕಾರವಾಗಿದೆ. 'ಅದು ಕಾಣುತ್ತದೆ, ಇದು ಕಾಣುತ್ತದೆ,' ಎಂದು ಹಲಬುತ್ತಾನೆ. ಆದ್ದರಿಂದ ಇವನನ್ನು ಈ ರೋಗದಿಂದ ಗುಣಪಡಿಸಿಕೊಡಿರಿ" ಎಂದು. ಆ ಡಾಕ್ಟರರೂ ಕುರುಡರೇ ಆಗಿದ್ದರು. ಅವರು ಆಪರೇಶನ್‌ಮಾಡಿ ಹುಡುಗನ ಎರಡೂ ಕಣ್ಣುಗಳನ್ನು ಕುರುಡು ಮಾಡಿದರು. ಅನಂತರ ಅವನು 'ಅದು ಕಾಣುತ್ತದೆ, ಇದು ಕಾಣುತ್ತದೆ' ಎನ್ನುವುದನ್ನು ಬಿಟ್ಟುಬಿಟ್ಟ, ಆಗ ಅವರೆಲ್ಲರೂ ಸಮಾಧಾನಪಟ್ಟುಕೊಂಡರು, "ಈಗ ಇವನಿಗೆ ಗುಣವಾಗಿದೆ, ಇವನೂ ನಮ್ಮಂತೆಯೇ ಆಗಿರುತ್ತಾನೆ" ಎಂದು.

ಹೀಗೆಕಾಯಿತು ಗೊತ್ತೇ? ಬಹು ಸಂಖ್ಯಾತರು ಕುರುಡರಿದ್ದುದೇ ಇದಕ್ಕೆ ಕಾರಣ. ಇವನಿಗೊಬ್ಬನಿಗೇ ಕಾಣುತ್ತದೆಂದ ಮೇಲೆ ಇವನಿಗೇನೋ ರೋಗ ಆಗಿರಲಿಕ್ಕೇಬೇಕೆಂದು ಅವರ ಪ್ರಾಮಾಣಿಕ ಮಾತಾಯಿತು. ಅರ್ಥಾತ್ ಬಹು ಮತದ ರಾಜ್ಯವೆಂಬುದು ಬರೇ ಒಂದು ಯಾಂತ್ರಿಕವಾದ ಕೆಲಸ. ಅದರಲ್ಲಿ ಸ್ವತಂತ್ರ ವಿಚಾರಕ್ಕೆ ಅವಕಾಶವಿಲ್ಲ.

– "ಗೀತಾಪ್ರವಚನ"ದಿಂದ

ಯುಗಾಚಾರ್ಯ ವಿವೇಕಾನಂದ

–ಕೆ.ಆರ್.ಶ್ರೀಹರಿ

"ನಿಮ್ಮ ಏಳಿಗೆ ನಿಮ್ಮ ಕೈಯಲ್ಲೇ ಇದೆ, ಏಳಿ! ಎದ್ದೇಳಿ, ಗುರಿಮುಟ್ಟುವ ತನಕ ನಿಲ್ಲದಿರಿ" –ಇದು ವಿವೇಕಾನಂದರು ಯುವಜನತೆಗೆ ನೀಡಿದ ಸಲಹೆ.

ಪಶ್ಚಿಮ ಬಂಗಾಳದ ಕಲ್ಕತ್ತೆಯ ವಕೀಲರಾಗಿದ್ದ ವಿಶ್ವನಾಥದತ್ತ ಮತ್ತು ಭುವನೇಶ್ವರಿ ದಂಪತಿಗಳಿಗೆ ೧೮೬೩ ರ ಜನವರಿ ೧೨ ರಂದು ವಿವೇಕಾನಂದರು ಜನಿಸಿದರು. ಇವರ ಮೊದಲ ಹೆಸರು ನರೇಂದ್ರನಾಥ. ಇವರಿಗೆ ಬಾಲ್ಯದಿಂದಲೇ ದೇವರಲ್ಲಿ ಅಪಾರ ಭಕ್ತಿ. ತಾಯಿಯು ಪುರಾಣದ ಕಥೆಗಳನ್ನು ನರೇಂದ್ರರಿಗೆ ಹೇಳುವ ಮೂಲಕ ಅವರಲ್ಲಿ ದೇವರ ಒಲವನ್ನು ಹೆಚ್ಚಿಸಿದರು. ದಯೆ ಎಂಬುದು ನರೇಂದ್ರರ ಹುಟ್ಟುಗುಣ. ಇವರು ದೀನದಲಿತರ ಕಷ್ಟಗಳನ್ನು ನೋಡಿ ಮರುಗುತ್ತಿದ್ದರು.

ನರೇಂದ್ರರಿಗೆ ಏಕಾಗ್ರತೆಯೂ ಉತ್ತಮವಾಗಿತ್ತು. ಒಮ್ಮೆ ಅವರು ಮತ್ತು ಅವರ ಸ್ನೇಹಿತರು ಧ್ಯಾನಕ್ಕೆಂದು ಕುಳಿತರು. ಆಗ ಒಂದು ಹಾವು ಬಂದಿತು. ಸ್ನೇಹಿತರೆಲ್ಲಾ ಎದ್ದು ಕೂಗಿದರು. ಆದರೆ ನರೇಂದ್ರ ಮಾತ್ರ ಹಾಗೇ ಕುಳಿತಿದ್ದರು. ಅವರಿಗೆ ಹಾವಿನ ಬಗ್ಗೆ ಅರಿವೇ ಇರಲಿಲ್ಲ. ಇದು ಅವರ ಏಕಾಗ್ರತೆಗೆ ಸಾಕ್ಷಿ.

ನರೇಂದ್ರರಿಗೆ ಬಹಳಷ್ಟು ಬಾರಿ ದೇವರ ಬಗ್ಗೆ ಅನುಮಾನಗಳು ಕಾಡುತ್ತಿದ್ದವು. ಬಹಳಷ್ಟು ಜನರನ್ನು ಇದರ ಬಗ್ಗೆ ಪ್ರಶ್ನಿಸಿದರು. ಆದರೆ ಅವರ ಉತ್ತರಗಳು ನರೇಂದ್ರನ ಮನ ಮುಟ್ಟಲಿಲ್ಲ.

ಕಾಲೇಜು ವಿದ್ಯಾಭ್ಯಾಸ ಮಾಡುತ್ತಿದ್ದಾಗ ನರೇಂದ್ರರು ಒಮ್ಮೆ ದಕ್ಷಿಣೇಶ್ವರಕ್ಕೆ ಹೋಗಿ ಅಲ್ಲಿನ ಸಂತರಾಮಕೃಷ್ಣ ಪರಮಹಂಸರನ್ನು ಕಂಡು ಅವರ ಅನುಗ್ರಹವನ್ನು ಸಂಪಾದಿಸಿದರು.–ಗುರುಸೇವೆಗಾಗಿ ಜೀವನವನ್ನು ಮುಡಿಪಾಗಿಟ್ಟರು. ಒಮ್ಮೆ ನರೇಂದ್ರರು ಪರಮಹಂಸರನ್ನು – "ನೀವು ದೇವರನ್ನು ನೋಡಿದ್ದೀರಾ. ಎಂದು ಕೇಳಿದರು. ಆಗ ಪರಮಹಂಸರು "ಹೌದು! ನೋಡಿದ್ದೇನೆ, ನೀನು ಆಸೆ ಪಟ್ಟಲ್ಲಿ ನಿನಗೂ ತೋರಿಸುವೆನು", ಎಂದು ಉತ್ತರಿಸಿದರು. ಹೀಗೆ ನರೇಂದ್ರರು ಪರಮಹಂಸರನ್ನು ಗುರುಗಳಾಗಿ ಸ್ವೀಕರಿಸಿದರು. ಕ್ರಮೇಣ ಪರಮಹಂಸರು ಇಹಲೋಕ ತ್ಯಜಿಸಿದರು. ಅನಂತರ ನರೇಂದ್ರರು ಕಲ್ಕತೆಯ ಬಾರಾ ನಗರದಲ್ಲಿ ಶ್ರೀ ರಾಮಕೃಷ್ಣ ಮಠವನ್ನು ಸ್ಥಾಪಿಸಿದರು. ಅವರು ದೇಶ ಸಂಚಾರ ಮಾಡಿದರು. ಆಗ ಅವರು ಕಂಡದ್ದು ಭಾರತದಲ್ಲಿ ಎಲ್ಲೆಲ್ಲಿಯೂ ದಾರಿದ್ರ್ಯ. ತಿನ್ನಲು ಅನ್ನವಿಲ್ಲದ, ಉಡಲು ಬಟ್ಟೆಯಿಲ್ಲದ ಜನರೇ ಹೆಚ್ಚು. ಧರ್ಮವೂ ಸಹ ಮೂಲೆ ಸೇರಿತ್ತು. ಪ್ರತಿ ಕಡೆಯಲ್ಲೂ ಆಶಾಂತಿ, ಅಲಸ್ಯ, ನರೇಂದ್ರರು ಒಮ್ಮೆ ಕನ್ಯಾಕುಮಾರಿಗೆ ಬಂದಾಗ ಅಲ್ಲಿರುವ ಸಮುದ್ರದ ನಡುವಿನ ಬಂಡೆಯೊಂದರ ಮೇಲೆ ಕುಳಿತು ಧ್ಯಾನ

ಮಾಡಿದರು. ಈಗಲೂ ಸಹ ಆ ಬಂಡೆಯನ್ನು "ವಿವೇಕಾನಂದರ ಬಂಡೆ" ಎಂದು ಕರೆಯಲಾಗುತ್ತದೆ.

ನರೇಂದ್ರರು ಸನ್ಯಾಸಿ ಜೀವನವನ್ನು ನಡೆಸಬೇಕೆಂಬ ಮಹದಾಸೆಯೂ ಪರಮಹಂಸರಲ್ಲಿ ಇತ್ತು. ಆ ವೇಳೆಗೆ ನರೇಂದ್ರರು ಸನ್ಯಾಸಿ ಜೀವನ ನಡೆಸುತ್ತಿದ್ದರು. ನರೇಂದ್ರರ ಬಗ್ಗೆ ಅಪಾರವಾಗಿ ತಿಳಿದಿದ್ದ ಪ್ರೊ॥ ರೈಟ್ ಎಂಬುವವರು ವಿಶ್ವ ಸರ್ವ ಧರ್ಮ ಸಮ್ಮೇಳನಕ್ಕೆ ಅರ್ಹರಾದ ವ್ಯಕ್ತಿಗಳನ್ನು ಆಯ್ಕೆ ಮಾಡುವ ಸಮಿತಿಯ ಅಧ್ಯಕ್ಷರಾದ ಡಾಕ್ಟರ್ ಬಾರ್‍ರೋಸ್‌ರವರಿಗೆ ಪತ್ರ ಬರೆದಿದ್ದರು. ಆ ಪತ್ರದಲ್ಲಿ ನರೇಂದ್ರರನ್ನು ಹೀಗೆ ವಿಶ್ಲೇಷಿಸಲಾಗಿತ್ತು, "ಇಲ್ಲಿ ಸಮ್ಮೇಳನಕ್ಕೆ ಎಲ್ಲಾ ನಮ್ಮ ಪ್ರಾಧ್ಯಾಪಕರನ್ನು ಕೂಡಿದರೂ ಅವರೆಲ್ಲರಿಗಿಂತ ಹೆಚ್ಚು ತಿಳಿದುಕೊಂಡಿರುವ ವ್ಯಕ್ತಿಯೊಬ್ಬರಿದ್ದಾರೆ". ನರೇಂದ್ರರು ಸಮ್ಮೇಳನಕ್ಕೆ ಭಾರತದ ಪ್ರತಿನಿಧಿಯಾಗಿ ಆಯ್ಕೆಯಾದರು. ಅವರು ಖೇತ್ರಿ ಮಹಾರಾಜರ ಉದಾರ ನೆರವಿನಿಂದ ಅಮೇರಿಕೆಗೆ ಪಯಣ ಮಾಡಿದರು. ಆ ಮಹಾರಾಜರೇ ನರೇಂದ್ರರನ್ನು ವಿವೇಕಾನಂದ ಎಂದು ಕರೆದರು.

ಅಂದು ಸೋಮವಾರ, ಸೆಪ್ಟೆಂಬರ್ ೧೧, ೧೮೯೩, ವಿಶ್ವಸರ್ವಧರ್ಮ ಸಮ್ಮೇಳನವನ್ನು ಚಿಕಾಗೊವಿನ 'ಗ್ರೇಟ್ ಹಾಲ್ ಆಫ್ ಕೊಲಂಬಸ್'ನಲ್ಲಿ ಆಯೋಜಿಸಲಾಗಿತ್ತು. ಸರಿ ಸುಮಾರು ೭೦೦೦ ಪ್ರೇಕ್ಷಕರು ಸೇರಿದ್ದರು. ನರೇಂದ್ರರಿಗೆ ಪ್ರಾರಂಭದಲ್ಲಿ ಭಯವಾಗಿತ್ತು. ಅವರು ತಮ್ಮ ಭಾಷಣವನ್ನು "ಅಮೇರಿಕೆಯ ಅಕ್ಕತಂಗಿಯರೇ ಮತ್ತು ಅಣ್ಣತಮ್ಮಂದಿರೇ" ಎಂಬುದರ ಮೂಲಕ ಪ್ರಾರಂಭಿಸಿದರು. ಇದನ್ನು ಕೇಳಿ ಸುಮಾರು ೨ ನಿಮಿಷಗಳ ಕಾಲ ಚಪ್ಪಾಳೆಯ ಸದ್ದು ಮುಗಿಲು ಮುಟ್ಟಿತು. ಅವರು ಹಿಂದೂ ಧರ್ಮದ ಬಗ್ಗೆ ತಿಳಿಸಿದರು. ಅವರ ಮಾತುಗಳು ಅಲ್ಲಿನ ಜನರ ಮೇಲೆ ಹೆಚ್ಚು ಪ್ರಭಾವ ಬೀರಿದವು. ಅಮೇರಿಕೆಯ ದಿನಪತ್ರಿಕೆಗಳು ವಿವೇಕಾನಂದರನ್ನು ಬಹಳವಾಗಿ ಕೊಂಡಾಡಿತು. ನಂತರ ಅನೇಕರು ವಿವೇಕಾನಂದರ ಶಿಷ್ಯರಾದರು. ವಿವೇಕಾನಂದರು ಭಾರತಕ್ಕೆ ಹಿಂದಿರುಗಿದರು. ಹೀಗೆ ವಿವೇಕಾನಂದರು ಭಾರತದ ಕೀರ್ತಿಪತಾಕೆಯನ್ನು ವಿಶ್ವದೆಲ್ಲೆಡೆ ಹಾರಿಸಿದರು.

ಭಾರತಕ್ಕೆ ಹಿಂದಿರುಗಿದ ನಂತರ ರಾಮಕೃಷ್ಣ ಮಿಷನ್ ಸ್ಥಾಪಿಸಿದರು. ಅದರ ಮುಖ್ಯ ಗುರಿ ಮತ್ತು ಧ್ಯೇಯಗಳನ್ನು ವಿವೇಕಾನಂದರೇ ತಿಳಿಸಿದರು. 'ರಾಮಕೃಷ್ಣ ಮಿಷನ್' ಪರಮಹಂಸರ ಸಂದೇಶವನ್ನು ಇಡೀ ಜಗತ್ತಿಗೆ ತಿಳಿಸಿತು. ಅದರ ಧ್ಯೇಯವೇನೆಂದರೆ "ಆತ್ಮನೋಮೋಕ್ಷಾರ್ಥಂ ಜಗತ್ ಹಿತಾಯ ಚ" ಎಂದು.


ಈ ಸಾಧನೆಗಳಿಂದ ವಿವೇಕಾನಂದರು 'ನವಯುಗಾಚಾರ್ಯ' ಎಂದು ಕರೆಯಲ್ಪಟ್ಟರು. ಧರ್ಮ ಜಾಗೃತಿಗೆ ದುಡಿದ ವಿವೇಕಾನಂದರು, ೧೯೦೨ರ ಜುಲೈ ೪ ರಂದು ಇಹಲೋಕ ತ್ಯಜಿಸಿದರು.

***

ಜನಪದ ನಿಲಯದ ಅಂತರಂಗದಲ್ಲಿ......೩೪

-ಸುರೇಂದ್ರ ಕೌಲಗಿ

ನೀನಿರುವೆಡೆ ಏನಿದಿಯೊ ಅದನ್ನೇ ಉಪಯೋಗಿಸಿಕೊಂಡು ನಿನಗೆ ಸಾಧ್ಯವಾದುದನ್ನು ಮಾಡು. *-ಥಿಯೋಡಾರ್ ರೂಸ್‌ವೆಲ್ಟ್*



ಗಾಂಧಿ ವಿಚಾರಾಧಾರಿತ ಸಂಸ್ಥೆ, ಜನಪದ ಸೇವಾ ಟ್ರಸ್ಟ್ ಆಗಿರುವುದರಿಂದ ಗ್ರಾಮೀಣ ಅಂಗವಿಕಲ ಮಕ್ಕಳ ಏಳಿಗೆಗಾಗಿ ನಾನು ಪ್ರಾರಂಭಿಸಬೇಕೆಂದಿದ್ದ ಕರುಣಾಗೃಹದ ಉದ್ಘಾಟನೆಯನ್ನು ಗಾಂಧಿ ಜಯಂತಿಯಂದು ಇಟ್ಟುಕೊಳ್ಳಲು ತೀರ್ಮಾನಿಸಿದೆ. ಈ ಮೊದಲು ಕೆಲ ಅಂಗವಿಕಲ ಮಕ್ಕಳನ್ನು ಕರುಣಾಗೃಹಕ್ಕೆ ಸೇರಿಸಿಕೊಳ್ಳುವ ಉದ್ದೇಶದಿಂದ ಪತ್ರಿಕೆಯಲ್ಲಿ ಪ್ರಕಟಣೆಗಳನ್ನು ಕೊಟ್ಟೆ. ಈ ಪ್ರಕಟಣೆಯ ಫಲವಾಗಿ ಹತ್ತಾರು ಅಂಗವಿಕಲ ಮಕ್ಕಳು ಕರ್ನಾಟಕದ ಬೇರೆ ಬೇರೆ ಜಿಲ್ಲೆಗಳಿಂದ ಬಂದರು. ಅವರಲ್ಲಿ ಕೆಲವರು ಹುಡುಗಿಯರೂ ಇದ್ದರು. ಅಂಬೆಗಾಲಿಟ್ಟುಕೊಂಡು ನಡೆಯುವಂತವರು ಕೆಲವರಾಗಿದ್ದರೆ, ಪೂರ್ತ ತೆವಳಿಕೊಂಡೆ ಮುಂದೆ ಸರಿಯುವಂಥವರು ಕೆಲವರಾಗಿದ್ದರು. ಇನ್ನು ಕೆಲವರು ಒಂದು ಕೈ ಅಥವಾ ಅರ್ಧ ಕೈ ಅಥವಾ ಹಸ್ತ ಮತ್ತು ಪಾದ ಇಲ್ಲದಂಥವರಾಗಿದ್ದರು ಹಾಗೂ ವಿದ್ಯಾಭ್ಯಾಸದ ಬಗ್ಗೆ, ಕೆಲಸ-ಕಾರ್ಯದ ಬಗ್ಗೆ ಆಸಕ್ತಿಯುಳ್ಳವರಾಗಿದ್ದರು. ಇವರ ದೈಹಿಕ ವಿಕಲತೆಯನ್ನು ನೋಡಿದಾಗ ಮತ್ತು ಇವರೆಲ್ಲರೂ ಒಟ್ಟಿಗೆ ಪ್ರಾರ್ಥನೆ ಮತ್ತು ಊಟಕ್ಕಾಗಿ ಒಟ್ಟಿಗೆ ಓಡಾಡಿದಾಗ ದುಃಖ ಉಮ್ಮಳಿಸುತ್ತಿತ್ತು. ಈ ಮಾನಸಿಕ ಸ್ಥಿತಿಯಿಂದ ಬಿಡುಗಡೆ ಹೊಂದಲು ಸ್ವಲ್ಪ ಕಾಲಾವಕಾಶ ಬೇಕಾಯಿತು. ಅವರನ್ನು ನೋಡಿದಾಗ ಉಂಟಾಗುತ್ತಿದ್ದ ದುಃಖ ಕ್ರಮೇಣ ಕರುಣೆಯ ಸ್ವರೂಪವನ್ನು ತಾಳಿತು. ಮುಂದೆ ಸ್ವಲ್ಪ ಸಮಯದ ನಂತರ ಕರುಣೆಯ ಸ್ಥಾನವನ್ನು ಪ್ರೇಮಭಾವನೆಯು ಆವರಿಸಿಕೊಂಡಿತು. ಆನಂತರ ಅವರ ಏಳಿಗೆಗೆ ಅಗತ್ಯವಾದ ಅವಕಾಶಗಳನ್ನು ಒದಗಿಸಿಕೊಡಬೇಕೆಂಬ ವಾಸ್ತವಿಕ ಪ್ರಜ್ಞೆ ಮನಸ್ಸನ್ನು ತುಂಬಿಕೊಂಡಿತು. ಅವರೊಂದಿಗಿನ ನಿಕಟತಮವಾದ ಒಡನಾಟದಿಂದ ಅವರಲ್ಲಿಯ ಸುಪ್ತ ಸಾಮರ್ಥ್ಯದ ಪರಿಚಯವಾಗತೊಡಗಿತು. ಯಾವ ಮನೆಯಲ್ಲಿ ಕರುಣಾಗೃಹವನ್ನು ಪ್ರಾರಂಭಿಸಿದ್ದೆನೊ ಅದು ಯಾವ ರೀತಿಯಲ್ಲೂ ಅಂಗವಿಕಲ ಮಕ್ಕಳ ಕಾರ್ಯಕ್ರಮಕ್ಕೆ ಸೂಕ್ತವಾಗಿರಲಿಲ್ಲ. ಈಗ ಅಂಗವಿಕಲರಿಗಾಗಿ ಪ್ರಾರಂಭವಾಗಿರುವ ಸಂಸ್ಥೆಗಳ ಭವ್ಯ ಹಾಗೂ ಆಧುನಿಕ ಸುಸಜ್ಜಿತ ಕಟ್ಟಡಗಳನ್ನು ನೋಡಿದಾಗ ಎಂಥ ಒಂದು ಸಾಮಾನ್ಯ ಹಾಗೂ ಸರಳವಾದ ಕಟ್ಟಡದಲ್ಲಿ ಸಾಮಾಜಿಕ ಮಹತ್ವದ ಈ ಕಾರ್ಯಕ್ರಮ

ಪ್ರಾರಂಭವಾಯಿತೆಂಬುದು ಸೋಜಿಗದ ಆದರೆ ಹೆಮ್ಮೆಯ ವಿಷಯವೆನಿಸುತ್ತದೆ. ನೀಲನಕ್ಷೆಯನ್ನು ತಯಾರಿಸಿ ಬಹು ದೊಡ್ಡ ಬಜೆಟ್ ಇಟ್ಟುಕೊಂಡು ಸಮಾಜದಲ್ಲಿರುವ ಪ್ರಭಾವಿ ವ್ಯಕ್ತಿಗಳ ಆಡಳಿತ ಮಂಡಳಿಗಳನ್ನು ರಚಿಸಿಕೊಂಡು ಪ್ರಾರಂಭವಾಗುವ ಇಂದಿನ ಸಂಸ್ಥೆಗಳೆಲ್ಲಿ? ಈ ಪ್ರಕಾರದ ಯಾವುದೇ ಸ್ವರೂಪವಿಲ್ಲದೆ ಪ್ರಾರಂಭವಾದ-ಕರುಣಾಗೃಹವೆಲ್ಲಿ? ಕರುಣಾಗೃಹವನ್ನು ಪ್ರಾರಂಭಿಸಿದಾಗ ನನ್ನ ಕೈನಲ್ಲಿ ಹಣವೆ ಇರಲಿಲ್ಲವೆಂಬುದನ್ನು ತಿಳಿದು ಯಾರಿಗಾದರೂ ಆಶ್ಚರ್ಯವಾಗಬಹುದು. ಬಹುಶಃ ನಂಬಲಿಕ್ಕಿಲ್ಲ ಕೂಡ. ಆದರೆ ಕೈಗೊಂಡಿದ್ದ ಕಾರ್ಯದ ಮಹತ್ವ ಮತ್ತು ಅದರ ಅಗತ್ಯ ಆ ಕಾರ್ಯವನ್ನು ಮುನ್ನಡೆಸಿಕೊಂಡು ಹೋಗುವ ಇಂಧನಗಳಾಗಿದ್ದವು. ಈ ಕಾರ್ಯಕ್ರಮದ ವಿಷಯ ತನ್ನಷ್ಟಕ್ಕೆ ತಾನೆ ಸಮಾಜಕ್ಕೆ ಗೊತ್ತಾಗುತ್ತಾ ಹೋದಂತೆ ಸಣ್ಣ ಪ್ರಮಾಣದಲ್ಲಿ ಹಣ ಸಂಗ್ರಹವಾಗುತ್ತ ಬಂತು. ಬಂದ ಹಣವೆಲ್ಲವು ಟ್ರಸ್ಟಿನ ಲೆಕ್ಕಕ್ಕೆ ಕಡ್ಡಾಯವಾಗಿ ಸೇರಿಕೊಳ್ಳುತ್ತಿತ್ತು. ಟ್ರಸ್ಟನ್ನು ಪ್ರಾರಂಭಿಸಿದಾಗ ಅದಕ್ಕೆ ಯಾವುದೇ ಮೂಲಧನವಿರಲಿಲ್ಲವೆಂಬುದನ್ನು ನಾನು ಈಗಾಗಲೆ ತಿಳಿಸಿದ್ದೇನೆ. ಟ್ರಸ್ಟ್ ಕರುಣಾಗೃಹವನ್ನು ಪ್ರಾರಂಭಿಸಿದ ಮೇಲೆ ಬಂದ ಸಾರ್ವಜನಿಕ ಧನಸಹಾಯವೆ ಟ್ರಸ್ಟ್‌ನ ನಿಧಿಯಾಗುತ್ತಲೂ ಬಂತು. ಇಂದಿಗೂ ಸಹ ಅದೇ ರೀತಿ ನಡೆದಿದೆ. ಕ್ರಮೇಣ ಕರುಣಾಗೃಹದ ಮಕ್ಕಳ ಸಂಖ್ಯೆ ಮೂವತ್ತರವರೆಗೆ ಹೋಯಿತು. ಮಕ್ಕಳ ಊಟೋಪಚಾರಕ್ಕಾಗಿ ಒಂದು ವ್ಯವಸ್ಥಿತವಾದ ಆರ್ಥಿಕ ವಿಷಯಕ್ಕೆ ಸಂಬಂಧಿಸಿದ ಯೋಜನೆಯನ್ನು ರೂಪಿಸುವ ಅಗತ್ಯ ಉಂಟಾಯಿತು. ಇದಕ್ಕೂ ಮುನ್ನ ಕೆಲವೊಂದು ಸಲ ಮಕ್ಕಳ ಊಟದ ವ್ಯವಸ್ಥೆಗಾಗಿ ಬಹಳ ಕಷ್ಟಪಡಬೇಕಾಗಿ ಬರುತ್ತಿತ್ತು. ಒಂದೆರಡು ಸಲ ಕೇವಲ ತರಕಾರಿಯನ್ನು ಮಾತ್ರ ಬೇಯಿಸಿ ಮಕ್ಕಳಿಗೆ ಕೊಟ್ಟು ಕಾಲ ನೂಕಿದ್ದು ಉಂಟು. ಇಂಥ ಬಿಕ್ಕಟ್ಟನ್ನು ಪರಿಹರಿಸುವ ದೃಷ್ಟಿಯಿಂದ ಹೊಸ ಆರ್ಥಿಕ ಯೋಜನೆಯ ಬಗ್ಗೆ ಆಲೋಚಿಸತೊಡಗಿದೆ. ಹೀಗೆ ಆಲೋಚಿಸುತ್ತಿರುವಾಗ ಮತ್ತು ಗಿರಿಜಾರವರ ಜೊತೆ ಮಾತನಾಡುತ್ತಿರುವಾಗ ಮಕ್ಕಳ ಒಂದು ದಿನದ ಊಟದ ಖರ್ಚನ್ನು ಲೆಕ್ಕಹಾಕಿ ಒಂದು ವರ್ಷದ ಮೊತ್ತವನ್ನು ಕಂಡು ಹಿಡಿದೆವು. ಆ ಮೊತ್ತವನ್ನು ದಾನಿಗಳಿಂದ ಪಡೆದು ಮಕ್ಕಳ ಊಟದ ವ್ಯವಸ್ಥೆ ಮಾಡಬೇಕೆಂದು ಆಲೋಚಿಸಿ ಆ ಯೋಜನೆಗೆ 'ಅಂತಃಕರಣ ಯೋಜನೆ' ಎಂದು ನಾಮಕರಣ ಮಾಡಿದೆವು. ಈ ಯೋಜನೆಯಡಿ ದಾನಿಗಳು ತಮ್ಮ ತಂದೆ-ತಾಯಿಗಳ ಹೆಸರಿನಲ್ಲಾಗಲಿ, ಮಕ್ಕಳ ಹೆಸರಿನಲ್ಲಾಗಲಿ ಕರುಣಾಗೃಹದ ಮಕ್ಕಳಿಗೆ ಊಟದ ವ್ಯವಸ್ಥೆಗಾಗಿ ಹಣ ಕೊಡುವ ಯೋಜನೆ ಇದಾಗಿತ್ತು. ಈ ಯೋಜನೆ ಜನಪ್ರಿಯವಾಯಿತು. ಇದರ ಅಂಗವಾಗಿ ಅನೇಕ ದಾನಿಗಳು ಹಣಕೊಡಲು ಮುಂದೆ ಬಂದರು. ದಾನಿಗಳು ಉಟೋಪಚಾರಕ್ಕೆ ಕೊಡುವ ಮೊತ್ತವನ್ನು ಸ್ಥಳೀಯ ಎಸ್.ಬಿ.ಎಂ ಶಾಖೆಯಲ್ಲಿ ನಿಗದಿತ ಠೇವಣಿಗಳಲ್ಲಿ ತೊಡಗಿಸುತ್ತಾಹೋದೆ. ೧೯೬೦ರ ದಶಕಗಳಲ್ಲಿ ಪದಾರ್ಥಗಳ ಬೆಲೆ ಕಡಿಮೆ ಇದ್ದುದರಿಂದ ಒಂದು ತಿಂಗಳಿಗೆ ಮಕ್ಕಳ ಊಟೋಪಚಾರದ ಖರ್ಚು ೧೦೦೦ ರೂಪಾಯಿಗಳಷ್ಟಾಗುತ್ತಿತ್ತು. ಅಡುಗೆ ಮಾಡುವವನಿಗೆ ಕೇವಲ ೩೦೦ ರೂಪಾಯಿಗಳಷ್ಟು ವೇತನ ಕೊಡುತ್ತಿದ್ದೆವು. ಕರುಣಾಗೃಹದ ಮನೆಗೆ ವಿದ್ಯುತ್ ಸಂಪರ್ಕ ಇಲ್ಲದೆ ಇದ್ದುದರಿಂದ ಅದಕ್ಕೆ ಸಂಬಂಧಿಸಿದ ಖರ್ಚು ಇರುತ್ತಿರಲಿಲ್ಲ. ಸೌದೆ, ಆಹಾರ ಪದಾರ್ಥ ಇತ್ಯಾದಿಗಳ ಬೆಲೆ ಕೂಡ ಕಡಿಮೆ ಇರುತ್ತಿತ್ತು. ಒಂದು ಅಥವಾ ಎರಡು ರೂಗೆ ಒಂದು ಹೊರೆ ಸೌದೆ ಮತ್ತು ಹತ್ತು ಪೈಸೆಗೆ ಒಂದು ಪಾವು

ಮೊಸರು ದೊರೆಯುತ್ತಿತ್ತು. ೭೫ ಪೈಸೆಗೆ ೧ ಕೆ.ಜಿ ಅಕ್ಕಿ ದೊರೆಯುತ್ತಿತ್ತು. ಆದ್ದರಿಂದ ಒಂದು ತಿಂಗಳಿಗೆ ಮೂವತ್ತು ಮಕ್ಕಳಿಗೆ ೧೦೦೦ ರೂಪಾಯಿನಲ್ಲಿ ಊಟದ ವ್ಯವಸ್ಥೆ ಮಾಡಲು ಸಾಕಾಗುತ್ತಿತ್ತು. ಪ್ರತಿ ತಿಂಗಳು ೫, ೧೦,೨೦ ರೂಗಳನ್ನು ಕಳುಹಿಸಿಕಡುವಂಥ ದಾನಿಗಳೂ ಸಹ ಸಿಕ್ಕರು. ಹೀಗೆ ಕರುಣಾಗೃಹದ ಕಾರ್ಯಕ್ರಮಕ್ಕೆ ಧನಸಹಾಯದ ಮೂಲ ರೂಪಗೊಂಡಿತು.

ಈ ಎಲ್ಲ ಮಕ್ಕಳ ದೈನಂದಿನ ಜೀವನ ಚರ್ಯೆಯನ್ನು ಹಿರಿಯ ವಿದ್ಯಾರ್ಥಿಗಳ ಸಹಾಯದಿಂದ ನಿರ್ವಹಿಸುತ್ತಿದ್ದೆ. ಆಶ್ರಮದ ಮಾದರಿಯಲ್ಲಿ ಕರುಣಾಗೃಹದ ದಿನಚರಿ ನಡೆಯುತ್ತಿತ್ತು. ಎರಡು ಹೊತ್ತು ಪ್ರಾರ್ಥನೆ ಮತ್ತು ಪೆಟ್ಟಿಗೆ ರೀತಿಯ ಚರಕದಲ್ಲಿ ನೂಲು ತೆಗೆಯುವಿಕೆ ಇತ್ಯಾದಿ ನಡೆಯುತ್ತಿದ್ದವು. ಪ್ರಾರ್ಥನೆ ಸಮಯದಲ್ಲಿ ಎಲ್ಲ ಹುಡುಗರು ಸಾಮೂಹಿಕವಾಗಿ ನೂಲು ತೆಗೆಯುತ್ತಿದ್ದರು. ಮಣ್ಣಿನ ನೆಲವಾದ್ದರಿಂದ ಪ್ರತಿ ವಾರಕ್ಕೊಮ್ಮೆ ಸಗಣಿಯಿಂದ ಸಾರಿಸಬೇಕಾಗುತ್ತಿತ್ತು. ಆ ಕೆಲಸವನ್ನು ಮಕ್ಕಳು ಬಹಳ ಉತ್ಸಾಹದಿಂದ ಮಾಡುತ್ತಿದ್ದರು. ಈ ವಿದ್ಯಾರ್ಥಿಗಳಲ್ಲಿ ಆಗ ಪ್ರಮುಖರಾಗಿದ್ದವರು. ಪಿ.ಎಲ್.ಕುಮಾರಸ್ವಾಮಿ, ಎಸ್.ವಿಶ್ವನಾಥ್, ನರಸಿಂಹ, ಮುನಿವೆಂಕಟಯ್ಯ, ಜಗದಾಂಬ, ರಾಚಪ್ಪ, ಲಿಂಗಯ್ಯ, ಮುಂತಾದವರು. ಕುಮಾರಸ್ವಾಮಿ ಇಂಥ ಎಲ್ಲ ಕೆಲಸಗಳಲ್ಲಿ ಬಹು ಆಸಕ್ತಿಯಿಂದ ಭಾಗವಹಿಸುತ್ತಿದ್ದರು ಮತ್ತು ಮಕ್ಕಳಲ್ಲಿ ಉತ್ಸಾಹ ತುಂಬುತ್ತಿದ್ದರು. ವಿದ್ಯುತ್ ದೀಪ ಇಲ್ಲದೆ ಇದ್ದುದರಿಂದ ಸೀಮೆಎಣ್ಣೆಯನ್ನು ಉಪಯೋಗಿಸಿ ಲಾಟೀನುಗಳನ್ನು ಬೆಳಗಿಸಬೇಕಾಗುತ್ತಿತ್ತು. ಸಂಜೆಯಾದೊಡನೆ ದೀಪ ಹಚ್ಚಲು ಲಾಟೀನುಗಳು ಸಿದ್ಧವಾಗಿರುವಂತೆ ಬೆಳಿಗ್ಗೆಯೆ ನೋಡಿಕೊಳ್ಳುತ್ತಿದ್ದರು. ಅಂದರೆ ಲಾಟೀನುಗಳಿಗೆ ಸೀಮೆಎಣ್ಣೆ ಹಾಕುವುದು, ಲಾಟೀನುಗಳ ಬರ್ನರ್‌ಗಳನ್ನು ಸ್ವಚ್ಛಗೊಳಿಸುವುದು ಹಾಗೂ ಗಾಜುಗಳನ್ನು ಚೆನ್ನಾಗಿ ಒರೆಸಿತೊಳೆದು ಹಾಕುವುದು ಅಲ್ಲದೆ ಸ್ವಚ್ಛವಾಗಿರುವ ಲಾಟೀನು ಗಾಜು ಪುನಃ ಮಸಿಯಿಂದ ಕೊಳೆಯಾಗದಂತೆ, ದೀಪ ಸರಿಯಾಗಿ ಉರಿಯಲು ಅನುಕೂಲವಾಗುವ ರೀತಿ ಬತ್ತಿಯನ್ನು ಕತ್ತರಿಸುವುದು ಇದೆಲ್ಲ ಸಾಲದೆಂಬಂತೆ ಲಾಟೀನಿನ ಹೊರಮೈಯನ್ನು ಸಹ ಚೆನ್ನಾಗಿ ಉಜ್ಜಿ ಒರೆಸಿ ಸ್ವಚ್ಛವಾಗಿಡುವುದನ್ನು ಕೂಡ ಮಾಡುತ್ತಿದ್ದರು. ಇವೆಲ್ಲ ಕೆಲಸಗಳ ಮೂಲಕ ವಿದ್ಯಾರ್ಥಿಗಳು ಬಹಳಷ್ಟು ಕಲಿಯುತ್ತಿದ್ದರು. ಸಂಜೆಯಾದೊಡನೆ ಪ್ರಾರ್ಥನೆಯನ್ನು ಮುಗಿಸಿ ಸಾಲಾಗಿ ಕುಳಿತು ಊಟಮಾಡುತ್ತಿದ್ದರು. ನಂತರ ಈಚಲ ಚಾಪೆಗಳನ್ನು ಹಾಸಿಕೊಂಡು ಪ್ರತ್ಯೇಕ ಸ್ಥಳಗಳಲ್ಲಿ ಲಾಟೀನುಗಳನ್ನಿಟ್ಟುಕೊಂಡು ಅದರ ಸುತ್ತಲೂ ಬಗ್ಗಿಕೊಂಡು ಕುಳಿತು ಓದುವುದನ್ನು, ಬರೆಯುವುದನ್ನು ಮಾಡುತ್ತಿದ್ದರು. ಆಗ ಅವರ ಮುಖದ ಮೇಲೆ ಲಾಟೀನಿನ ದೀಪದ ಪ್ರಕಾಶ ಬಿದ್ದಿರುತ್ತಿತ್ತು. ಅದು ಅವರ ಭವಿಷ್ಯದ ಪ್ರಕಾಶವೂ ಆಗಿತ್ತು.

(ಮುಂದುವರಿಯುವುದು)

ಬಣ್ಣದ ಗೋಸುಂಬೆಗಳು

ಬಣ್ಣ ಬಣ್ಣದ ಗೋಸುಂಬೆ
ಕೆಂಪು ಬಣ್ಣ ಎಷ್ಟು ಚೆನ್ನ
ನಕ್ಕಿತು ಗೋಸುಂಬೆ ಬಣ್ಣಬದಲಿಸಿ.
ಕಿತ್ತಳೆ ಬಣ್ಣ ಅಚ್ಚ ಸುವರ್ಣ
ಮುಸುಕಿನೊಳಗಿಂದ ಮುಸಿನಕ್ಕು
ಅಂದಿತು ಗೋಸುಂಬೆ ನನ್ನ ಬಣ್ಣ ಇದಲ್ಲ.
ಓ, ಬಣ್ಣ ಕಪ್ಪಾಯಿತಲ್ಲ
ಇದೂ ಸಲ್ಲ ನನ್ನ ಬಣ್ಣ ಎಂದ
ಗೋಸುಂಬೆಯ ಸುತ್ತ ಮತ್ತೆಷ್ಟೋ ಗೋಸುಂಬೆಗಳು
ಆದರ್ಶಗಳ ಹೊರೆ ಹೊತ್ತ ಸ್ವಂತಿಕೆ ನಡೆದಿತ್ತು ಬೀಗುತ್ತ
ಗೋಸುಂಬೆಗಳ ಭರದ ನಡೆದಾಟ
ಕುರುಡು ತುಳಿದಾಟ ಸ್ವಂತಿಕೆಕುಸಿದಿತ್ತು
ಆದರ್ಶಗಳ ಹೊರೆ ಮುರಿದಿತ್ತು ಜಜ್ಜಿ ನುಚ್ಚು ನೂರಾಗಿತ್ತು
ಮತ್ತೆ ಮೇಲೆದ್ದ ಸ್ವಂತಿಕೆ ನೋಡಿಕೊಂಡಿತು
ಅಯ್ಯೋ ತನ್ನ ಮೇಲೆಲ್ಲಾ ಬಣ್ಣಗಳೇ ಬಣ್ಣಗಳು
ಅದೇ ಗೋಸುಂಬೆಗಳ ಬಣ್ಣಗಳು

–ಜೆ.ವೈದೇಹಿ

ಪುಸ್ತಕ ವಿಚಾರ

ಪುಸ್ತಕದ ಹೆಸರು–ರೋಗನಿರೋಧಕ ತಂಬುಳಿಗಳು

ಲೇಖಕರು–ಆರೂರು ಮಂಜುನಾಥರಾವ್

ಬೆಲೆ–೧೦/–ರೂ

ಸಿಗುವ ಸ್ಥಳ_ಶಾಂತಿವನ, ಕೀರ್ತಿನಗರ, ಅಂಚೆ: ಆರೂರು–೫೭೬೨೬೯, ಉಡುಪಿ ಜಿಲ್ಲೆ.

ದೂರವಾಣಿ ೦೮೨೦/ ೨೫೬೯೨೯

ಲೇಖಕರ ಈ ಮಾತು ಮುಖ್ಯವಾಗಿದೆ "ಈ ಪುಸ್ತಕದಲ್ಲಿ ತಿಳಿಸಲಾದ ಎಲ್ಲ ಗಿಡಗಳು ಸೇರಿ ಔಷಧಿ ಗುಣಗಳುಳ್ಳ ಸುಮಾರು ೨೫೦ ಗಿಡ, ಬಳ್ಳಿ, ಮರಗಳು ನನ್ನ ೩೦ ಸೆಂಟ್ ಜಾಗದಲ್ಲಿ ನಗುನಗುತ್ತ ಬೆಳೆಯುತ್ತಿವೆ. ದೂರವಾಣಿ ಮುಖಾಂತರ ಖಚಿತಪಡಿಸಿಕೊಂಡು ಯಾವಾಗಬೇಕಾದರೂ ಬಂದು ಈ ಗಿಡಗಳನ್ನು ವೀಕ್ಷಿಸಬಹುದು.

ವಾಚಕ ಮಿತ್ರರಲ್ಲಿ ವಿನಂತಿ.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸದ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೆ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜಹಿತ ವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಅದರಲ್ಲಿಯೂ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಹ ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ನಿಮ್ಮನ್ನು ಜನಪದ ವಿಚಾರದ ಲೇಖಕರ ಬಳಗಕ್ಕೆ ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ 15 ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

(–ಸಂಪಾದಕರು)

ತೆರೆದ-ಅಂಚೆ

KA / SK / MND / 470 / 2006-2008
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..... ....

....

....

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.DTP Sanketh, Melkote. Printed at INDIVARA, Nagamangala
Phone : 08236 – 298754 e-mail : janapada@yahoo.com